ಕರ್ನಾಟಕ ವಿಧಾನ ಪರಿಷತ್ತು

# ಸರ್ಕಾರಿ ಭರವಸೆಗಳ ಸಮಿತಿ
# (2016-2017)

# ನಲವತ್ತಾರನೆಯ ವರದಿ

## ಭಾಗ-1

ವಿಧಾನ ಪರಿಷತ್ತಿಗೆ ಒಪ್ಪಿಸಿದ ದಿನಾಂಕ: 23-02-2018



ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನ ಸೌಧ, ಬೆಂಗಳೂರು - 560001

ಕರ್ನಾಟಕ ವಿಧಾನ ಪರಿಷತ್ತು

# ಸರ್ಕಾರಿ ಭರವಸೆಗಳ ಸಮಿತಿ

# (2016–2017)

# ನಲವತ್ತಾರನೆಯ ವರದಿ

ವಿಧಾನ ಪರಿಷತ್ತಿಗೆ ಒಪ್ಪಿಸಿದ ದಿನಾಂಕ: 23–2–2018

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

ವಿಧಾನ ಸೌಧ, ಬೆಂಗಳೂರು – 560 001

**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ**

**ವಿಧಾನ ಸೌಧ, ಬೆಂಗಳೂರು–560 001.**

# ಸರ್ಕಾರಿ ಭರವಸೆಗಳ ಸಮಿತಿ

**(2016–2017)**

2016–17ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳ ವಿವರ ಕೆಳಕಂಡಂತಿದೆ :

## ಸಮಿತಿಯ ರಚನೆ

**ಅಧ್ಯಕ್ಷರು**
**ಶ್ರೀ ಬಸವರಾಜ ಹೊರಟ್ಟಿ**

**ಸದಸ್ಯರುಗಳು**

**ಶ್ರೀಯುತರುಗಳಾದ:**

| | | | |
|---|---|---|---|
| 01 | ಕೆ.ಸಿ. ಕೊಂಡಯ್ಯ | 05 | ರಘುನಾಥರಾವ್ ಮಲ್ಕಾಪೂರೆ |
| 02 | ಬಸವರಾಜ ಪಾಟೀಲ್ ಇಟಗಿ | 06 | ಶರಣಪ್ಪ ಮಟ್ಟೂರು |
| 03 | ಕೆ.ಟಿ. ಶ್ರೀಕಂಠೇಗೌಡ | 07 | ಟಿ.ಎ. ಶರವಣ |
| 04 | ಭಾನುಪ್ರಕಾಶ | 08 | ಬಿ.ಎಸ್. ಸುರೇಶ್ |

**ವಿಧಾನ ಪರಿಷತ್ತಿನ ಅಧಿಕಾರಿಗಳು:**

**ಶ್ರೀಮತಿ / ಶ್ರೀಯುತರುಗಳಾದ:**

1. ಕೆ.ಆರ್. ಮಹಾಲಕ್ಷ್ಮಿ : ಕಾರ್ಯದರ್ಶಿ (ಪ್ರ)
2. ಎಸ್. ನಿರ್ಮಲ : ಉಪ ಕಾರ್ಯದರ್ಶಿ
3. ಮೋಹನ್ ಕೆ. ಮುಗಳಿ : ಅಧೀನ ಕಾರ್ಯದರ್ಶಿ

# ಪೀಠಿಕೆ

ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಪರವಾಗಿ 2016–2017ನೇ ಸಾಲಿನ ಸಮಿತಿಯ 46ನೆಯ ವರದಿಯನ್ನು ಮಂಡಿಸಲು ಹರ್ಷಿಸುತ್ತೇನೆ.

2016–17ನೇ ಸಾಲಿನಲ್ಲಿ ರಚಿಸಲಾದ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯು ತನ್ನ ಪ್ರಾರಂಭಿಕ ಸಭೆಯನ್ನು ದಿನಾಂಕ: 04.01.2016ರಂದು ನಡೆಸಿ ತದನಂತರ, ನಡೆಸಲಾದ ಸಭೆಗಳ ವಿವರ ಕೆಳಕಂಡಂತಿದೆ.

**ಸಮಿತಿ ಸಭೆಗಳ ವಿವರ ಕೆಳಕಂಡಂತಿದೆ**

| ಕ್ರಮ ಸಂಖ್ಯೆ | ಇಲಾಖೆಗಳ ಹೆಸರು | ದಿನಾಂಕ | ಸಮಿತಿ ಸಭೆಯಲ್ಲಿ ಚರ್ಚಿಸಲಾದ ಬಾಕಿ ಭರವಸೆಗಳು | ಮುಕ್ತಾಯಗೊಂಡ ಭರವಸೆ | ಪುಟ ಸಂಖ್ಯೆ ಭಾಗ–1 ಮತ್ತು 2 |
|---|---|---|---|---|---|
| 1 | ಕಾನೂನು | 25.01.2016<br>19.07.2017 | 06<br>08 | 06<br>06 | 1–10 |
| 2 | ಸಣ್ಣ ನೀರಾವರಿ | 18.04.2017 | 15 | 12 | 11–24 |
| 3 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ | 18.01.2016<br>07.09.2016<br>27.01.2017<br>25.04.2017<br>27.09.2017<br>24.10.2017 | 29<br>28<br>15<br>30<br>01<br>24 | 14<br>13<br>05<br>24<br>01<br>16 | 25–118 |
| 4 | ಸಾರ್ವಜನಿಕ ಉದ್ದಿಮೆಗಳ ಇಲಾಖೆ | 12.07.2017 | 01 | 01 | 119 |

| ಕ್ರಮ ಸಂಖ್ಯೆ | ಇಲಾಖೆಗಳ ಹೆಸರು | ದಿನಾಂಕ | ಸಮಿತಿ ಸಭೆಯಲ್ಲಿ ಚರ್ಚಿಸಲಾದ ಬಾಕಿ ಭರವಸೆಗಳು | ಮುಕ್ತಾಯಗೊಂಡ ಭರವಸೆ | ಪುಟ ಸಂಖ್ಯೆ ಭಾಗ-1 ಮತ್ತು 2 |
|---|---|---|---|---|---|
| 5 | ಮೂಲಸೌಲಭ್ಯ ಅಭಿವೃದ್ಧಿ | 06.05.2016<br>10.06.2016<br>05.07.2017 | 07<br>07<br>06 | 05<br>04<br>06 | 120–151 |
| 6 | ಉನ್ನತ ಶಿಕ್ಷಣ | 08.02.2016<br>28.9.2016<br>16.5.2017<br>28.06.2017 | 09<br>16<br>17<br>37 | 02<br>12<br>04<br>32 | 152–210 |
| 7 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ | 11.1.2016<br>07.04.2016<br>10.6.2016<br>30.08.2017 | 26<br>04<br>03<br>13 | 22<br>04<br>01<br>08 | 211–256 |
| 8 | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ | 06.01.2017 | 04 | 04 | 257–267 |
| 9 | ಜಲಸಂಪನ್ಮೂಲ | 14.10.2016<br>01.02.2016<br>30.10.2017<br>04.12.2017 | 26<br>–<br>54<br>55 | 18<br>–<br>47<br>43 | 268–424 |
| 10 | ಗೃಹ | 09.08.2017 | 23 | 16 | 425–447 |

| ಕ್ರಮ ಸಂಖ್ಯೆ | ಇಲಾಖೆಗಳ ಹೆಸರು | ದಿನಾಂಕ | ಸಮಿತಿ ಸಭೆಯಲ್ಲಿ ಚರ್ಚಿಸಲಾದ ಬಾಕಿ ಭರವಸೆಗಳು | ಮುಕ್ತಾಯಗೊಂಡ ಭರವಸೆ | ಪುಟ ಸಂಖ್ಯೆ ಭಾಗ-1 ಮತ್ತು 2 |
|---|---|---|---|---|---|
| 11 | ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಹಾಗೂ ಕಾನೂನು ಮಾಪನ ಶಾಸ್ತ್ರ | 24.08.2016 | 05 | 04 | 448-451 |
| 12 | ಸಹಕಾರ | 22.02.2016<br>21.10.2016<br>04.04.2017<br>30.05.2017 | 14<br>18<br>06<br>19 | 09<br>14<br>03<br>14 | 452-524 |
| 13 | ಆರ್ಥಿಕ | 04.04.2017 | 04 | 04 | 525-535 |
| 14 | ತೋಟಗಾರಿಕೆ | 21.09.2016<br>19.07.2016 | 29<br>12 | 27<br>12 | 536-629 |
| 15 | ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ | 31.08.2016<br>05.07.2017 | 13<br>04 | 10<br>02 | 630-639 |
| 16 | ಕೃಷಿ | 14.09.2016 | 40 | 33 | 640-683 |
| 17 | ಕನ್ನಡ, ಸಂಸ್ಕೃತಿ ಮತ್ತು ವಾರ್ತಾ | 24.08.2016 | 19 | 13 | 684-696 |

| | | | | | |
|---|---|---|---|---|---|
| 18 | ವಸತಿ | 17.08.2016 | 07 | 06 | ಭಾಗ–I<br>697–706 |
| 19 | ಕಾರ್ಮಿಕ | 22.04.2016<br>26.12.2017 | 07<br>05 | 03<br>03 | 707–715 |
| 20 | ಸಾರಿಗೆ | 06.01.2017 | 10 | 08 | 716–721 |
| 21 | ಇಂಧನ | 13.05.2016<br>24.06.2016 | 07<br>37 | 03<br>36 | 722–781 |
| 22 | ಯುವ ಸಬಲೀಕರಣ ಮತ್ತು ಕ್ರೀಡಾ | 02.03.2017 | 10 | 06 | 782–786 |
| 23 | ಪಶುಸಂಗೋಪನೆ ಮತ್ತು ಮೀನುಗಾರಿಕೆ | 17.08.2016 | 08 | 06 | 787–796 |
| 24 | ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ | 12.07.2017<br>26.12.2017 | 01<br>21 | 01<br>18 | 797–816 |
| 25 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 03.06.2016<br>16.12.2016 | 07<br>03 | 05<br>02 | 817–826 |
| 26 | ಕಂದಾಯ | 27.05.2016<br>23.02.2017<br>09.05.2017<br>13.09.2017 | 41<br>44<br>44<br>59 | 32<br>35<br>38<br>30 | 827–1021 |

| | | | | | |
|---|---|---|---|---|---|
| 27 | ಹಿಂದುಳಿದ ವರ್ಗಗಳ ಕಲ್ಯಾಣ | 31.08.2016<br>04.11.2016<br>30.05.2017 | 08<br>05<br>10 | 05<br>04<br>09 | 1022–1039 |
| 28 | ವಾಣಿಜ್ಯ ಮತ್ತು ಕೈಗಾರಿಕೆ | 20.05.2016<br>17.06.2016<br>23.05.2017<br>26.12.2017 | 12<br>36<br>33<br>01 | 07<br>29<br>25<br>– | 1040–1120 |
| 29 | ಲೋಕೋಪಯೋಗಿ | 15.02.2016<br>15.04.2016 | 37<br>16 | 25<br>09 | 1186–1237 |
| 30 | ವೈದ್ಯಕೀಯ ಶಿಕ್ಷಣ | 28.10.2016<br>07.11.2017 | 25<br>14 | 21<br>07 | 1238–1314 |
| 31 | ನಗರಾಭಿವೃದ್ಧಿ | 11.11.2016<br>23.12.2016<br>19.12.2017 | 110<br>29<br>21 | 04<br>23<br>09 | 1315–1328 |
| 32 | ಪ್ರವಾಸೋದ್ಯಮ | 04.01.2016<br>16.12.2016 | 10<br>01 | 07<br>01 | 1329–1333 |
| 33 | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ | 04.01.2016<br>13.01.2017 | 14<br>50 | 12<br>45 | 1334–1441 |

| | | | | | |
|---|---|---|---|---|---|
| 34 | ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ | 04.11.2016 | 03 | 02 | 1142-1143 |
| | ಒಟ್ಟು ಮುಕ್ತಾಯಗೊಂಡ ಭರವಸೆಗಳು | | 1379 | 957 | |

2016-2017ನೇ ಸಾಲಿನಲ್ಲಿ ಸಮಿತಿಯು ದಿನಾಂಕ: 04.01.2016 ರಿಂದ 26.12.2017ರವರೆಗೆ ಒಟ್ಟು 1379 ಭರವಸೆಗಳನ್ನು ಪರಿಶೀಲಿಸಿ ಆ ಪೈಕಿ ಒಟ್ಟು 74 ಸಭೆಗಳನ್ನು ನಡೆಸಿ, 34 ಇಲಾಖೆಯ 957 ಭರವಸೆಗಳನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಅಲ್ಲದೆ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆ, ಆರ್ಥಿಕ ಇಲಾಖೆ, ಮೂಲ ಸೌಲಭ್ಯ ಇಲಾಖೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಭರವಸೆಗಳನ್ನು ಸರ್ಕಾರವು ಈಡೇರಿಸಿದ ಹಿನ್ನೆಲೆಯಲ್ಲಿ ಸದರಿ ಇಲಾಖೆಯ ಎಲ್ಲಾ ಬಾಕಿ ಭರವಸೆಗಳು ಮುಕ್ತಾಯಗೊಂಡು ಬಾಕಿ ಭರವಸೆಗಳು ಶೂನ್ಯಗೊಂಡಿರುತ್ತದೆ.

ಮೇಲ್ಕಂಡ ದಿನಾಂಕಗಳಲ್ಲಿ ನಡೆದ ಸಮಿತಿಯ ಸಭೆಗಳಿಗೆ ಹಾಜರಾಗಿ ಸಮಿತಿಗೆ ಬೇಕಾದಂತಹ ಅವಶ್ಯಕ ಮಾಹಿತಿಗಳನ್ನು ಒದಗಿಸಿದ ಸರ್ಕಾರದ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ ಹಾಗೂ ಸಮಿತಿಯ ಸಭೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಸಹಕರಿಸಿದ ಸಮಿತಿಯ ಎಲ್ಲಾ ಸದಸ್ಯರುಗಳಿಗೂ ಮತ್ತು ವಿಧಾನ ಪರಿಷತ್ತಿನ ಕಾರ್ಯಾಲಯದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೂ ಸಮಿತಿಯು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ.

ಬೆಂಗಳೂರು,
ದಿನಾಂಕ: 22-2-2018

**ಬಸವರಾಜ ಹೊರಟ್ಟಿ**
ಅಧ್ಯಕ್ಷರು
ಸರ್ಕಾರಿ ಭರವಸೆಗಳ ಸಮಿತಿ

# ಮುನ್ನುಡಿ

ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಮಾನ್ಯ ಸದಸ್ಯರುಗಳು ರಾಜ್ಯದ ಅಭಿವೃದ್ಧಿ ಕಾರ್ಯಗಳ ಬಗ್ಗೆ, ಸರ್ಕಾರದ ಯೋಜನೆಗಳ ಅನುಷ್ಠಾನ ಹಾಗೂ ಪ್ರಗತಿಯ ಬಗ್ಗೆ, ಕಾರ್ಯಾಂಗದಲ್ಲಿನ ವೈಫಲ್ಯತೆ ಹೀಗೆ ಹತ್ತು ಹಲವಾರು ಸಾರ್ವಜನಿಕ ಮಹತ್ವದ ವಿಷಯಗಳ ಬಗ್ಗೆ ಸರ್ಕಾರದೊಂದಿಗೆ ಚರ್ಚಿಸಲು ಹಾಗೂ ಮಾಹಿತಿ ಪಡೆಯಲು ಸದನದಲ್ಲಿ ಪ್ರಶ್ನೆಗಳು/ಸೂಚನೆಗಳು/ನಿಯಮ-72/ನಿಯಮ-330/ವಿಧೇಯಕದ ಮೇಲೆ ಚರ್ಚೆ/ಶೂನ್ಯವೇಳೆ ಪ್ರಸ್ತಾವದ ಮೂಲಕ ಪ್ರಸ್ತಾಪಿಸುವ ವಿಷಯಗಳಿಗೆ ಸದನದಲ್ಲಿ ಮಂತ್ರಿಗಳು ಉತ್ತರವನ್ನು ನೀಡುವಾಗ ನೀಡಿರುವ ಭರವಸೆ/ಆಶ್ವಾಸನೆ/ವಾಗ್ದಾನಗಳನ್ನು ನೀಡುವುದು ರೂಢಿಯಲ್ಲಿರುತ್ತದೆ. ಅಂತಹ ಭರವಸೆ/ಆಶ್ವಾಸನೆ/ವಾಗ್ದಾನಗಳು ಎಷ್ಟರ ಮಟ್ಟಿಗೆ ಸರ್ಕಾರದಿಂದ ಕಾರ್ಯಗತವಾಗಿವೆ, ಕಾರ್ಯಗತವಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣ/ನ್ಯೂನತೆ/ಕಾನೂನಿನ ಚೌಕಟ್ಟಿನಡಿಯಲ್ಲಿ ಬರುವ ತೊಡಕುಗಳನ್ನು ಪರಿಹರಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆಯೇ ಎಂಬುದನ್ನು ಪರಿಶೀಲಿಸಿ ಕಾರ್ಯಾಂಗಕ್ಕೆ ಸೂಕ್ತ ಮಾರ್ಗದರ್ಶನ ನಿರ್ದೇಶನಗಳನ್ನು ನೀಡುತ್ತಾ, ಭರವಸೆಗಳು ಈಡೇರಿವೆಯೇ ಎಂಬುದನ್ನು ಪರಿಶೀಲಿಸಿ ಸದನಕ್ಕೆ ವರದಿ ನೀಡಲು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 260ರ ಮೇರೆಗೆ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯು ರಚನೆಗೊಂಡಿರುತ್ತದೆ.

ಸದನದಲ್ಲಿ ನೀಡಲಾಗಿರುವ ಭರವಸೆಗಳನ್ನು ಕಾರ್ಯಗತಗೊಳಿಸಲು ಸಮಿತಿಯು ಆಗಿಂದಾಗ್ಗೆ ಸಂಬಂಧಪಟ್ಟ ಇಲಾಖೆಗಳಿಗೆ ರವಾನಿಸಿ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಮಾಹಿತಿಗಳನ್ನು ಸಮಿತಿಗೆ ಒದಗಿಸಲು ಮೂರು ತಿಂಗಳ ಕಾಲಾವಧಿಯನ್ನು ಗೊತ್ತುಪಡಿಸಿರುತ್ತದೆ. ಆದರೆ, ಈವರೆಗೂ ಯಾವುದೇ ಭರವಸೆಗಳನ್ನು ನಿಗದಿತ ಮೂರು ತಿಂಗಳ ಅವಧಿಯಲ್ಲಿ ಈಡೇರಿಸಿದ ನಿದರ್ಶನಗಳಿರುವುದಿಲ್ಲ. ಆದ್ದರಿಂದ, ಕೊಟ್ಟಿರುವ ಭರವಸೆಗಳನ್ನು ಈಡೇರಿಸಲು ಮೂರು ತಿಂಗಳ ಬದಲಾಗಿ ಆರು ತಿಂಗಳ ಅವಧಿಯವರೆಗೆ ವಿಸ್ತರಿಸಿಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಸದನದಲ್ಲಿ ಮಾನ್ಯ ಮಂತ್ರಿಗಳು ಉತ್ತರಿಸುವಾಗ ನೀಡುವ ಆಶ್ವಾಸನೆಗಳನ್ನು ಆಯಾಯ ದಿನ ಸದನದಲ್ಲಿ ಹಾಜರಿರುವ ಇಲಾಖಾಧಿಕಾರಿಗಳು ಸಚಿವರು ನೀಡುವ ಭರವಸೆಗಳನ್ನು ಗುರುತುಮಾಡಿಕೊಂಡು ಸದರಿ ಭರವಸೆಗಳ ಕಾರ್ಯಗತಕ್ಕಾಗಿ ಪ್ರಾಮಾಣಿಕ ಪ್ರಯತ್ನ ಮಾಡಿರುವ ಯಾವುದೇ ಒಂದೂ ನಿದರ್ಶನವಿಲ್ಲ. ನಾನು ಈಗ ಈ ಹುದ್ದೆಯ/ ಇಲಾಖೆಯ ಅಧಿಕಾರ ವಹಿಸಿಕೊಂಡಿರುವೆ, ನಾನು ನೋಡಿಲ್ಲವೆಂಬ ಸಬೂಬುಗಳನ್ನೇ ಹೆಚ್ಚಾಗಿ ಹೇಳುವುದನ್ನು ಬಿಟ್ಟರೆ ಸರ್ಕಾರದ ಕೆಲಸದ ಬಗ್ಗೆ ಒಂದಿಷ್ಟು ಕಾಳಜಿಯನ್ನು ಯಾವೊಬ್ಬ ಇಲಾಖೆಯ ಅಧಿಕಾರಿಯೂ ಇದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲದಿರುವುದು ನೋವಿನ ಸಂಗತಿ. ಅದ್ದರಿಂದ ವಿಳಂಬಕ್ಕೆ ಇದು ಒಂದು ಕಾರಣವಾಗಿರುತ್ತದೆ. ಆದುದರಿಂದ, ಆಯಾಯ ದಿನವೇ ಇಲಾಖಾಧಿಕಾರಿಗಳು ಭರವಸೆಗಳನ್ನು ಗುರುತುಮಾಡಿಕೊಳ್ಳುವ ಪರಿಪಾಠವನ್ನು ಕಡ್ಡಾಯವಾಗಿ ಬೆಳೆಸಿಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇದರಿಂದ ನಿಗದಿತ ಅವಧಿಯೊಳಗೆ ನೀಡಿರುವ ಭರವಸೆಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗುತ್ತದೆ. ಆದರೆ, ನನ್ನ ಅನುಭವದಲ್ಲಿ ಹೇಳುವುದಾದರೆ ಸಮಿತಿಯು ಸಭೆ ಕರೆದಾಗ ಮಾತ್ರ ಭರವಸೆಗಳ ಕಡೆಗೆ ಇಲಾಖಾಧಿಕಾರಿಗಳು ಗಮನ ಹರಿಸುತ್ತಿದ್ದಾರೆ., ಈ ಪ್ರವೃತ್ತಿಯಿಂದ ಕೆಲವೊಂದು ಭರವಸೆಗಳು ಹತ್ತು-ಹದಿನೈದು ವರ್ಷಗಳಾದರೂ ಸಹ ಈಡೇರದೆ ಭರವಸೆಗಳಾಗಿಯೇ ಉಳಿಯಲು ಕಾರಣವಾಗಿದೆ. ಇದಲ್ಲದೆ ಮತ್ತೊಂದು ಪ್ರಮುಖವಾದ ಅಂಶವೆಂದರೆ ಮಾನ್ಯ ಮಂತ್ರಿಗಳು ಸದನದಲ್ಲಿ ಉತ್ತರಿಸುವಾಗ ಕಾರ್ಯರೂಪಕ್ಕೆ ತರಲು ಅಸಾಧ್ಯವಾದಂತಹ

ವಿಷಯಗಳಿಗೂ ಸಹ ಸಮಯೋಚಿತವಾಗಿ ಆಶ್ವಾಸನೆಗಳನ್ನು ನೀಡುವ ಪರಿಪಾಠವನ್ನು ಬೆಳೆಸಿಕೊಂಡಿರುವುದು ಒಂದು ವಿಪರ್ಯಾಸವೇ ಸರಿ. ಆದುದರಿಂದ, ಮಂತ್ರಿಗಳು ಉತ್ತರಿಸುವ ಪೂರ್ವದಲ್ಲಿ ಇಲಾಖಾಧಿಕಾರಿಗಳೊಂದಿಗೆ ಸಾಧಕ-ಬಾಧಕಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಕಾರ್ಯರೂಪಕ್ಕೆ ತರಬಹುದಾದಂತಹ ವಿಷಯಗಳಿಗೆ ಮಾತ್ರ ಆಶ್ವಾಸನೆಗಳನ್ನು ನೀಡುವುದು ಸೂಕ್ತ. ಧೀರ್ಘ ಕಾಲ ಭರವಸೆಗಳು ಬಾಕಿ ಉಳಿಯುವುದರಿಂದ, ಆಶ್ವಾಸನೆ ನೀಡುವ ಸರ್ಕಾರ ಮತ್ತು ಜಾರಿಗೊಳಿಸುವ ಸರ್ಕಾರಗಳು ಬೇರೆ ಬೇರೆಯಾಗಿ ಅವುಗಳ ನಿಲುವುಗಳು ಸಹ ಬೇರೆ ಬೇರೆಯಾಗುವುದರಿಂದ ಭರವಸೆಗಳನ್ನು ಈಡೇರಿಸಲು ಹಿನ್ನಡೆಯಾಗುತ್ತದೆ. ಯೋಜನೆಗಳನ್ನು ಅನುಷ್ಠಾನಗೊಳಿಸಲು ದೀರ್ಘ ಕಾಲ ತೆಗೆದುಕೊಂಡಲ್ಲಿ ಸದರಿ ಯೋಜನೆಗೆ ಮೀಸಲಿಟ್ಟ ಅನುದಾನದ ವೆಚ್ಚವು ನಾಲ್ಕು ಪಟ್ಟಿನಿಂದ 100 ಪಟ್ಟು ಹೆಚ್ಚಾಗಿರುವುದನ್ನು ಸಹ ಸಮಿತಿಯು ಗಮನಿಸಿರುತ್ತದೆ. ಉದಾಹರಣೆಗೆ ಬೆಣ್ಣೆತೋರಾ ದೊಡ್ಡ ನೀರಾವರಿ ಯೋಜನೆಗೆ 1960ರಲ್ಲಿ ಅಂದಾಜಿಸಲಾದ ವೆಚ್ಚ ರೂ. 78.83 ಕೋಟಿ ಆದರೆ ನವೆಂಬರ್, 2016ರವರೆಗೆ ಈಗಿನ ವೆಚ್ಚ ರೂ. 504.39 ಕೋಟಿ ಆಗಿರುತ್ತದೆ, ಅಮರ್ಜಾ ಯೋಜನೆಗೆ 1972ರಲ್ಲಿ ಅಂದಾಜಿಸಲಾದ ವೆಚ್ಚ ರೂ. 5.70ಕೋಟಿ, ನವೆಂಬರ್, 2016ರವರೆಗೆ ಖರ್ಚಾಗಿದ್ದು ರೂ. 295.83 ಕೋಟಿ. ಹಾಗೆಯೇ ಹುಬ್ಬಳ್ಳಿಯ ಕಿತ್ತೂರು ಚೆನ್ನಮ್ಮ ವೃತ್ತದಿಂದ ಉಣಕಲ್ ಕೆರೆಯವರೆಗೆ ಪ್ಲೈ ಓವರ್ ನಿರ್ಮಾಣ ಕಾಮಗಾರಿಗೆ ಅನುಮತಿ ಕೊಟ್ಟಾಗ 30 ಕೋಟಿಗಳಿಗೆ ಇದ್ದದ್ದು ಈಗ 300 ಕೋಟಿಯಷ್ಟು ಆಗಿರುತ್ತದೆ. ಹೀಗೆ ಕೆಲವೊಂದು ಕಡೆ ಕಾಮಗಾರಿಗಳನ್ನು ವಿಳಂಬ ಮಾಡಿ ಸದರಿ ಕಾಮಕಾರಿಗಳ ಅಂದಾಜು ವೆಚ್ಚವನ್ನು 100 ರಿಂದ 200 ಪಟ್ಟು ಹೆಚ್ಚಾಗುವಂತೆ ಮಾಡಿರುವುದಲ್ಲದೇ ಕೆಲವೊಂದು ಕಡೆ ಗುತ್ತಿಗೆದಾರರೊಂದಿಗೆ ಅಧಿಕಾರಿಗಳು ಶಾಮೀಲಾಗಿ ಅರ್ಥಿಕ ನಷ್ಟಕ್ಕೆ ಕಾರಣರಾಗಿರುತ್ತಾರೆ. ಅರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯದೇ ಮತ್ತೆ ಮರು ಟೆಂಡರ್ ಅನ್ನು ಕರೆಯುವಂತಹ ಪ್ರಸಂಗ ನಡೆದಿರುವುದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟ ಉಂಟಾಗಿರುತ್ತದೆ.

ಟೆಂಡರ್ ಕರೆಯುವಾಗ ಕೆ.ಟಿ.ಟಿ.ಪಿ. ಕಾಯ್ದೆಯನ್ನು ಉಲ್ಲಂಘನೆ ಮಾಡಿರುವುದು ಸಮಿತಿಯ ಗಮನಕ್ಕೆ ಕಂಡು ಬರುತ್ತದೆ. ಈ ರೀತಿಯ ಲೋಪದೋಷಗಳಿಂದ ಕಾಮಗಾರಿಯು ನಿಗದಿತ ಅವಧಿಯಲ್ಲಿ ಮುಕ್ತಾಯಗೊಳ್ಳದೇ ಅಂದಾಜು ವೆಚ್ಚವು ದುಪಟ್ಟು/ಮೂರು ಪಟ್ಟು ಹೆಚ್ಚಾಗಿರುವಂತೆ ಮಾಡಿದ ಅಧಿಕಾರಿಗಳ ಯಾವುದೇ ಕ್ರಮ ತೆಗೆದುಕೊಂಡ ಉದಾಹರಣೆಗಳು ಇಲ್ಲವೆ ಇಲ್ಲ ನಿವೃತ್ತಿಯಾದ ಎಸ್.ಡಿ.ಎ., ಎಫ್.ಡಿ.ಎ. ಗಳ ಮೇಲೆ ಕ್ರಮ ಕೈಗೊಂಡು ಒಂದೆರಡು increment ನಿಲ್ಲಿಸಿದ ಉದಾಹರಣೆಗಳನ್ನು ಬಿಟ್ಟರೆ, ತಪ್ಪು ಮಾಡಿರುವ ಹಿರಿಯ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಂಡ ಉದಾರಣೆಗಳು ಇಲ್ಲವೆ ಇಲ್ಲ ಎಂದರೂ ತಪ್ಪಾಗಲಿಕ್ಕಿಲ್ಲ. ಆದ್ದರಿಂದ ಇದಕ್ಕೆ ಕಾರಣೀಭೂತರಾದ ಅಧಿಕಾರಿಗಳನ್ನು ಮತ್ತು ಗುತ್ತಿಗೆದಾರರನ್ನು ಹೊಣೆಗಾರರನ್ನಾಗಿ ಮಾಡಿ ನಿಯಮಗಳ ಅನುಸಾರ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲು ಸಮಿತಿಯು ಅಭಿಪ್ರಾಯಪಡುತ್ತದೆ.

ಭರವಸೆಗಳ ಸಮಿತಿಯ ಇಲಾಖಾವಾರು ಬಾಕಿ ಇರುವ ಭರವಸೆಗಳನ್ನು ಆಯಾ ಇಲಾಖೆಯವರು ವಾರಕ್ಕೊಮ್ಮೆ ಸಭೆಯನ್ನು ಏರ್ಪಡಿಸಿ ಸಿದ್ದತೆ ಮಾಡಿಕೊಳ್ಳಲು ಅನುಕೂಲವಾಗುವಂತೆ ಪೂರ್ವಭಾವಿಯಾಗಿ ಒಂದು ತಿಂಗಳವರೆಗೆ ಸಮಯಾವಕಾಶವನ್ನು ನೀಡಲಾಗುತ್ತಿದೆ. ತದನಂತರ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ನಿಗದಿತ ಅವಧಿಯಲ್ಲಿ ಉತ್ತರವನ್ನು ಒದಗಿಸುವಂತೆ ಕೋರಿ, ಅರೆ ಸರ್ಕಾರಿ ಪತ್ರಗಳನ್ನು ಬರೆಯಲಾಗುತ್ತಿದೆ. ಇದರಿಂದ ಸಂಬಂಧಪಟ್ಟ ಭರವಸೆಗಳ ಪ್ರಗತಿ ಕಾರ್ಯ ಯಾವ ಹಂತದಲ್ಲಿದೆ ಎಂಬ ಬಗ್ಗೆ ಪರಾಮರ್ಶಿಸಿಕೊಂಡು ಹಿಂದಿನ ಸಭೆಗಳಲ್ಲಿ ನಡೆದ ಚರ್ಚೆಯ ಆಧಾರದ ಮೇಲೆ ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಪರಿಶೀಲಿಸಿ ಸಮಿತಿಗೆ ಉತ್ತರವನ್ನು ಒದಗಿಸಲು ಇಲಾಖೆಯವರಿಗೂ ಸಹ ಸಾಕಷ್ಟು ಸಮಯಾವಕಾಶವನ್ನು ನೀಡಲಾಗುತ್ತಿದೆ.

ಆದಾಗ್ಯೂ ಸಹ, ಬಹಳಷ್ಟು ಇಲಾಖಾಧಿಕಾರಿಗಳು ನಿಗದಿತ ಅವಧಿಯಲ್ಲಿ ಉತ್ತರಗಳನ್ನು ಒದಗಿಸುವಲ್ಲಿ ವಿಫಲರಾಗಿರುತ್ತಾರೆ. ಇದಕ್ಕೆ ಇಲಾಖಾ ಪ್ರಧಾನ ಕಾರ್ಯದರ್ಶಿಗಳು ತಮ್ಮ ಅಧೀನದ ವಿಭಾಗೀಯ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದ್ದು, ಅವರಿಂದ ಮಾಹಿತಿ ಬರುವಲ್ಲಿ ವಿಳಂಬವಾಗಿರುತ್ತದೆ ಎಂಬ ಕಾರಣವನ್ನು ನೀಡಿರುತ್ತಾರೆ. ಈ ವಾದವನ್ನು ಒಪ್ಪದ ಸಮಿತಿ ಇದಕ್ಕೆ ಪ್ರಧಾನ ಕಾರ್ಯದರ್ಶಿಗಳು/ಇಲಾಖಾ ಮುಖ್ಯಸ್ಥರನ್ನೆ ನೇರ ಹೊಣೆಗಾರರನ್ನಾಗಿ ಮಾಡಲು ಸಮಿತಿ ಶಿಫಾರಸ್ಸು ಮಾಡುತ್ತದೆ.ಪ್ರಧಾನ ಕಾರ್ಯದರ್ಶಿಗಳು ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆದಿದ್ದಾರೆ, ಇಲ್ಲವೇ ಡೆಲಿಗೇಟ್ಸ್ (Delegates) ಜೊತೆ ಸಭೆ ಇದೆಯೆಂದು ಹೇಳಿ ಸಭೆಗೆ ಹಾಜರಾಗುವುದರಿಂದ ವಿನಾಯಿತಿಯನ್ನು ಕೋರಿರುತ್ತಾರೆ. ಇದು ಅನಿವಾರ್ಯ ಸಂದರ್ಭಗಳಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಕಾರ್ಯದರ್ಶಿಗಳಿಗೆ ಸಮಿತಿ ಸಭೆಗೆ ಗೈರುಹಾಜರಾಗಲು ವಿನಾಯತಿ ನೀಡಲಾಗಿರುತ್ತದೆ. ಆದಾಗ್ಯೂ, ಪದೇ ಪದೇ ಕೆಲವು ಇಲಾಖಾ ಪ್ರಧಾನ ಕಾರ್ಯದರ್ಶಿಗಳು ಸಭೆಗೆ ಹಾಜರಾಗುವುದನ್ನು ತಪ್ಪಿಸಿಕೊಳ್ಳಲು ಈ ರೀತಿಯ ಕಾರಣವನ್ನು ತಿಳಿಸಿ ಪತ್ರ ಬರೆಯುವ ಪ್ರವೃತ್ತಿಯನ್ನು ಮುಂದುವರೆಸಿಕೊಂಡು ಬರುತ್ತಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿದೆ. ಕೆಲವು ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟು, ಕಛೇರಿಯಲ್ಲಿ ಕುಳಿತುಕೊಳ್ಳುವಂತಹ ಉದಾಹರಣೆಗಳು ಸಹ ಸಮಿತಿಯ ಗಮನಕ್ಕೆ ಬಂದಿರುವುದನ್ನು ನಾವು ಸೂಕ್ಷ್ಮವಾಗಿ ಪರಿಗಣಿಸಿ, ಈ ವಿಚಾರವನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಲಿಕ್ಕೆ ತೀರ್ಮಾನ ಮಾಡಿದಾಗ ಅವರು ಬಂದು ಕ್ಷಮೆ ಕೇಳಿರುವ ಉದಾಹರಣೆಗಳು ಸಮಿತಿಯ ಗಮನಕ್ಕೆ ಬಂದಿದೆ. ಹೀಗಾಗಿ, ಇಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ಅನಿವಾರ್ಯವಾಗುತ್ತದೆ ಎನ್ನುವುದು ಸಮಿತಿಯ ಅಭಿಪ್ರಾಯವಾಗಿದೆ. ಆದರೆ ಸರ್ಕಾರಗಳು ಇಂತಹ ಹಿರಿಯ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಗೊಡವೆಗೆ ಹೋಗದೆ ಅವರ ಮರ್ಜಿಯ ಮೇಲೆ ಸರ್ಕಾರ ನಡೆಯುತ್ತದೆಂಬ ಭಾವನೆ ಇತ್ತೀಚೆಗಷ್ಟೆ ಹೆಚ್ಚಾಗಿರುವುದರಿಂದ ಯಾವ ಅಧಿಕಾರಿಯೂ ಸಹ ಕಿಂಚಿತ್ತು ಹೆದರದೆ ನಾವೇ ಸರ್ಕಾರವೆಂಬ ಭಾವನೆಯಿಂದ ಇಡೀ ವ್ಯವಸ್ಥೆ ಹಾಳಾಗಿರುವುದು ವಿಪರ್ಯಾಸ.

ಇನ್ನು ಸಭೆಗೆ ಹಾಜರಾದಂತಹ ಇಲಾಖಾ ಪ್ರಧಾನ ಕಾರ್ಯದಶಿಗಳು ತಮ್ಮ ಅಧೀನದ ಅಧಿಕಾರಿಗಳೊಂದಿಗೆ ಪೂರ್ವಭಾವಿಯಾಗಿ ಸಭೆ ನಡೆಸಿ, ಪೂರ್ವ ತಯಾರಿಯೊಂದಿಗೆ ಸಭೆಗೆ ಹಾಜರಾಗದೆ ಲೋಕಾಭಿರಾಮವಾಗಿ ಸಭೆಗೆ ಹಾಜರಾಗಿ ಸಮಿತಿಯು ಕೋರಿದಂತಹ ಮಾಹಿತಿಗಳಿಗೆ ಸೂಕ್ತವಾದ ಉತ್ತರವನ್ನು ನೀಡುವಲ್ಲಿ ವಿಫಲರಾಗಿರುತ್ತಾರೆ. ಈ ವಿಷಯವನ್ನು ಎಲ್ಲಾ ಇಲಾಖೆಯ ಮುಖ್ಯಸ್ಥರುಗಳಿಗೆ ನೂರು ಬಾರಿಯಾದರೂ ಸೂಚಿಸಲಾಗಿದೆ ಆದರೂ ಕೂಡ ಸಭೆಯಲ್ಲಿ ಕೆಲವೊಮ್ಮೆ ತಮ್ಮ ಕಿರಿಯ ಅಧಿಕಾರಿಗಳು/ವಿಷಯ ನಿರ್ವಾಹಕರಿಂದ ಮಾಹಿತಿಯನ್ನು ಪಡೆಯಲು ಪ್ರಯತ್ನಿಸುವುದು ಇಲ್ಲವೇ ಕಡತಗಳನ್ನು ಪರಿಶೀಲಿಸುವುದು ಕಂಡು ಬಂದಿರುತ್ತದೆ. ಇದರ ಅರ್ಥ ಇವರುಗಳು ಪೂರ್ವಭಾವಿ ಸಭೆಗಳನ್ನು ನಡೆಸದೆ ಸಭೆಗಳಿಗೆ ಹಾಜರಾಗಿರುತ್ತಾರೆಂಬುದು ಸ್ಪಷ್ಟವಾಗುತ್ತದೆ. ಈ ರೀತಿ ಸಭೆಯಲ್ಲಿ ಕೋರಲಾದ ಪೂರಕ ಮಾಹಿತಿಗಳನ್ನು ನೀಡುವಲ್ಲಿ ಕೆಲವೊಂದು ಇಲಾಖಾಧಿಕಾರಿಗಳು ವಿಫಲಗೊಂಡಿದ್ದರಿಂದ, ಸಭೆಗಳ ಕಾರ್ಯಕಲಾಪವನ್ನು ನಡೆಸಲು ಸಾಧ್ಯವಾಗದೆ ಸಭೆಯನ್ನು ಮುಂದೂಡಿದಂತಹ ಪ್ರಸಂಗಗಳ ಬಗ್ಗೆ ಸಮಿತಿಯು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ. ಇದರಿಂದ, ಸಮಿತಿಯ ಸಭೆಗಳು ಅರ್ಥಪೂರ್ಣವಾಗಿ ನಡೆಯದೇ ವಿಷಯದ ಗಾಂಭೀರ್ಯತೆಯನ್ನು ಕಳೆದುಕೊಳ್ಳುತ್ತಿದೆ. ಇದಕ್ಕೆ ಪ್ರಮುಖವಾದ ಕಾರಣವೇನೆಂದರೆ ವಿಧಾನ ಮಂಡಲದ ಸಮಿತಿಗಳ ಬಗ್ಗೆ ಇಲಾಖಾಧಿಕಾರಿಗಳು ಹೊಂದಿರುವ ಋಣಾತ್ಮಕ ಧೋರಣೆಗಳು ಎಂದು ಸಮಿತಿಯು ಭಾವಿಸುತ್ತದೆ. ಈ ಬಗ್ಗೆ ಎಲ್ಲ ಅಧಿಕಾರಿಗಳಿಗೂ ಎಚ್ಚರಿಕೆ ನೀಡಿದ್ದಾಗ್ಯೂ ಈವತ್ತಿನವರೆಗೆ ಅನೇಕ ಅಧಿಕಾರಿಗಳು ಸಮಿತಿಯನ್ನು ಗಂಭೀರವಾಗಿ ಪರಿಗಣಿಸದಿರುವುದು ನೋವುಂಟು ಮಾಡಿದೆ. ಸಭೆಗೆ ಪ್ರಧಾನ ಕಾರ್ಯದರ್ಶಿಯವರೆ ಉತ್ತರ ಕೊಡುವುದು ನಿಯಮ. ಆದರೆ ಅದು ಎಂದು ಸಾಧ್ಯವಾಗಿಲ್ಲವೆಂಬುದು ವಿಷಾದದ ಸಂಗತಿ. ಅಲ್ಲದೆ, ಇಂತಹ ಅಧಿಕಾರಿಗಳ ಬಗ್ಗೆ ಕ್ರಮ ಕೈಗೊಳ್ಳಲು ಅನೇಕ

ಬಾರಿ ಸಮಿತಿಯು ಶಿಫಾರಸ್ಸು ಮಾಡಿದರೂ ಸಹ ಇದುವರೆಗೂ ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳದೆ ಇರುವುದು ವಿಪರ್ಯಾಸದ ಸಂಗತಿ. ಈ ಹಿನ್ನಲೆಯಲ್ಲಿ ಇನ್ನು ಮುಂದೆಯಾದರೂ ಸಮಿತಿಯ ಎಚ್ಚರಿಕೆಯನ್ನು ಸರ್ಕಾರ ಮತ್ತು ಮುಖ್ಯ ಕಾರ್ಯದರ್ಶಿ ಅವರು ಗಂಭೀರವಾಗಿ ಪರಿಗಣಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ. ಅಲ್ಲದೆ ಸಮಿತಿ ನೀಡಿದ ಮಾಹಿತಿಗಳನ್ನು ಪರಿಶೀಲಿಸಿ ಮಾನ್ಯ ಮುಖ್ಯಮಂತ್ರಿಯವರು ಕ್ರಮ ತೆಗೆದುಕೊಂಡಾಗ ಮಾತ್ರ ಇದಕ್ಕೆ ಒಂದು ಬೆಲೆ ಇರುತ್ತದೆ.

ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯಾಂಗ ಮತ್ತು ಶಾಸಕಾಂಗವು ಪರಸ್ಪರ ಸಹಕಾರ ಮತ್ತು ಗೌರವದೊಂದಿಗೆ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಸಮಿತಿ ಸಭೆಯ ಕಾರ್ಯ ಕಲಾಪಗಳು ನಡೆದಲ್ಲಿ ಸರ್ಕಾರವ ಯೋಜನೆಗಳು ಅನುಷ್ಠಾನಗೊಂಡು ರಾಜ್ಯದ ಪ್ರಗತಿಗೆ ಸಹಕಾರಿಯಾಗುತ್ತದೆ ಎಂಬುದನ್ನು ಮನಗಾಣಬೇಕು.

ಕರ್ನಾಟಕ ವಿಧಾನ ಮಂಡಲದ ಸಮಿತಿಗಳು ಸದನದ ಮುಂದುವರೆದ ಭಾಗವಾಗಿರುವುದರಿಂದ, ರಾಜ್ಯದ ಹಿತದೃಷ್ಟಿ ಹಾಗೂ ಸಾರ್ವಜನಿಕ ಮಹತ್ವವುಳ್ಳ ವಿಷಯಗಳನ್ನು ಚರ್ಚಿಸಲು ಸದನದಷ್ಟೇ ಗಾಂಭೀರ್ಯತೆ ಸಮಿತಿ ಸಭೆಗಳಿಗಿರುತ್ತದೆ. ಒಂದು ಸಭೆ ನಡೆಸಲು ಸರ್ಕಾರಕ್ಕೆ ಸುಮಾರು 5 ಲಕ್ಷ ರೂಪಾಯಿಗಳಷ್ಟು ಖರ್ಚು ಬರುತ್ತದೆ. ಸಮಿತಿಯ ಸಭೆಗಳು ಸರಿಯಾಗಿ ನಡೆಯದೆ ಮುಂದೂಡಿದಲ್ಲಿ ಇದರಿಂದ ಸರ್ಕಾರದ ಬೊಕ್ಕಸಕ್ಕೆ ಅಪಾರವಾದ ನಷ್ಟವುಂಟಾಗುತ್ತದೆ ಈ ಬಗ್ಗೆ ಇಲಾಖಾಧಿಕಾರಿಗಳು ಕಾಳಜಿವಹಿಸಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕೆಂಬುದು ಸಮಿತಿಯ ಅನಿಸಿಕೆ. ವಿಧಾನ ಮಂಡಲದ ಸಮಿತಿ ಸಭೆಗಳಲ್ಲಿ ಅಧಿಕಾರಿಗಳು ಕ್ರಿಯಾತ್ಮಕವಾಗಿ ಭಾಗವಹಿಸದಿರುವ ವಿಚಾರದಲ್ಲಿ ಭರವಸೆಗಳ ಸಮಿತಿಯ ಅಧ್ಯಕ್ಷನಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಆಡಳಿತ ಯಂತ್ರವನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹಾಗೂ ಎಲ್ಲಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರುಗಳಿಗೆ ಸೂಕ್ತ ನಿರ್ದೇಶನವನ್ನು ನೀಡಬೇಕೆಂದು ಕೋರಿ ಪತ್ರ ಬರೆಯಲಾಗಿತ್ತು. ಇದೇ ವಿಚಾರದಲ್ಲಿ ಅಂದಿನ ಮುಖ್ಯ ಕಾರ್ಯದರ್ಶಿಗಳವರುಗಳಾದ ಶ್ರೀ ಕೌಶಿಕ್ ಮುಖರ್ಜಿಯವರಿಗೆ ಕ್ರಮವಾಗಿ ದಿನಾಂಕ 01.01.2014, 15,09.2014, 15.05.2015 ಮತ್ತು 25.08.2015 ಗಳಂದು ಪತ್ರ ಬರೆಯಲಾಗಿತ್ತು. ಶ್ರೀ ಅರವಿಂದ್ ಜಾದವ್, ರವರಿಗೆ ದಿನಾಂಕ: 10.08.2016ರಂದು ಪತ್ರ ಬರೆಯಲಾಗಿದೆ ಹಾಗೂ ಶ್ರೀ ಸುಭಾಷ್ ಕುಂಠಿಆ ರವರಿಗೆ ದಿನಾಂಕ: 01.11.2016 ಮತ್ತು 16.05.2017ಗಳಂದು ಪತ್ರಗಳನ್ನು ಬರೆದರೂ ಮುಖ್ಯ ಕಾರ್ಯದರ್ಶಿರವರುಗಳು ನೆಪಕ್ಕೆ ಒಂದು ಪತ್ರ ಬರೆದು ಕೈತೊಳೆದುಕೊಂಡಿರುತ್ತಾರೆ. ಆದರೆ, ಫಲಿತಾಂಶ ಶೂನ್ಯವಾದ್ದರಿಂದ ಸಮಿತಿಯು ಇದನ್ನು ಗಂಭೀರವಾಗಿ ಪರಿಗಣಿಸಿ ಎಷ್ಟೇ ಪ್ರಯತ್ನಪಟ್ಟರೂ ಸುಧಾರಣೆಯಾಗದೆ ಇರುವುದು ನಮ್ಮ ಸಮಿತಿಯ ಸದಸ್ಯರಿಗೆ ಸಾಕಷ್ಟು ನೋವುಂಟು ಮಾಡಿದೆ. ಈ ಹಿನ್ನಲೆಯಲ್ಲಿ ಇದರ ಗಂಭೀರತೆಯನ್ನು ಅರಿತು ಮಾನ್ಯ ಸಭಾಪತಿಯವರ ಗಮನಕ್ಕೆ ತರಲು ಹಾಗೂ ಮುಂದೆ ಇವರ ವಿರುದ್ಧ ಕ್ರಮ ಕೈಗೊಳ್ಳಲು ಮಾನ್ಯ ಸಭಾಪತಿಯವರಿಗೆ ಕೋರಲಾಗುವುದು.

ದಿನಾಂಕ: 06.05.2016 ರಂದು ನಡೆದ ಸಮಿತಿ ಸಭೆಯಲ್ಲಿ ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಭರವಸೆ ಸಂಖ್ಯೆ: 2697/07 "ಹುಬ್ಬಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಸಂಬಂಧದಲ್ಲಿನ ಭೂಸ್ವಾಧೀನ ಪ್ರಕ್ರಿಯೆ ಹಾಗೂ ಕಾಮಗಾರಿ ಪ್ರಾರಂಭವಾಗುವ" ವಿಷಯಕ್ಕೆ ಸಂಬಂಧಪಟ್ಟಂತೆ ತೀರ್ಮಾನಿಸಲಾದ ರೀತ್ಯಾ ಮಾನ್ಯ ಅಧ್ಯಕ್ಷರು ದಿನಾಂಕ:10.05.2016 ರಂದು ಧಾರವಾಡ ಜಿಲ್ಲಾಧಿಕಾರಿಗಳೊಂದಿಗೆ ಖುದ್ದು ಸ್ಥಳ ಪರಿವೀಕ್ಷಣೆ ಮಾಡಿರುತ್ತಾರೆ.

ದಿನಾಂಕ: 13.07.2016 ರಂದು ಧಾರವಾಡ ಜಿಲ್ಲಾಧಿಕಾರಿಯವರು ವರದಿಯಲ್ಲಿ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕಾಗಿ ಅವಶ್ಯಕವಾಗಿದ್ದ 600 ಎಕರೆ ಭೂಮಿ ಬದಲಾಗಿ 707 ಎಕರೆ ಭೂ ಸ್ವಾಧೀನಕ್ಕೆ ನೋಟಿಫಿಕೇಶನ್ ಮಾಡಲಾಗಿದ್ದು, ಉಳಿಕೆ ಭೂಮಿಯನ್ನು ರೈತರಿಗೆ ವಾಪಸ್ಸು ನೀಡದೆ ಕೆ.ಐ.ಎ.ಡಿ.ಬಿ. ಅವರು ಖಾಸಗಿಯವರಿಗೆ ಅಲಾಟ್ ಮಾಡಿರುವ ಬಗ್ಗೆ ವಿವರವಾದ ವರದಿಯನ್ನು ಒದಗಿಸದಿದ್ದ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಯವರಿಂದ ಸಂಪೂರ್ಣ ಮಾಹಿತಿಯನ್ನು ಪಡೆದು ಸಮಿತಿಯ ಪರಾಮರ್ಶೆಗೆ ನೀಡಬೇಕೆಂದು ದಿನಾಂಕ: 04.01.2017 ರಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು ಕೋರಿ ಪತ್ರ ಬರೆಯಲಾಗಿತ್ತು. ಅದರಂತೆ, ದಿನಾಂಕ: 05.05.2017ರಲ್ಲಿ ಈ ಕೆಳಕಂಡಂತೆ ಮಾಹಿತಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ಧಾರವಾಡ ಇವರಿಂದ ಪಡೆದು ಸಲ್ಲಿಸಲಾಗಿರುತ್ತದೆ. ಸದರಿ ವರದಿಯ ಪ್ರಕಾರ ವಿಮಾನ ನಿಲ್ದಾಣಕ್ಕಾಗಿ 587.21 ಗುಂಟೆ, ಆಶ್ರಯ ಮನೆ ಹಾಗೂ ಸಂಪರ್ಕ ರಸ್ತೆಗಾಗಿ 19.00 ಗುಂಟೆ ಗಾಮನಗಟ್ಟಿಯಿಂದ ತಾರಿಹಾಳ ಬೈಪಾಸ್ ರಸ್ತೆಗಾಗಿ 13.10 ಗುಂಟೆ, ಲೋಕೋಪಯೋಗಿ ಇಲಾಖೆಗೆ–ಗೋಕಲದಿಂದ ತಾರಿಹಾಲ ಬೈಪಾಲ ವರೆಗೆ ರಸ್ತೆ ನಿರ್ಮಾಣಕ್ಕಾಗಿ 27.21 ಗುಂಟೆ, ಇನ್ಫೋಸಿಸ್ ಲಿ., ರವರಿಗೆ ಗೋಕಲು ಗ್ರಾಮದಲ್ಲಿ ಹಂಚಿಕೆ ಮಾಡಿದ್ದು (ಸರ್ಕಾರದ ಆದೇಶ ಸಂಖ್ಯೆ: ಸಿಐ/357/ಎಸ್‌ಪಿಐ/2012, ದಿನಾಂಕ 02.11.2012ರನ್ವಯ) 43.02 ಗುಂಟೆ, ಮೆ: ದೇಶಪಾಂಡೆ ಫೌಂಡೇಶನ್ ಇವರಿಗೆ ಗೋಕಲ ಗ್ರಾಮದಲ್ಲಿ ಸ್ಕಿಲ್ ಟ್ರೈನಿಂಗ್ ಸೆಂಟರ್ ಸಲುವಾಗಿ ಹಂಚಿಕೆ ಮಾಡಿದ್ದು (75ನೇ ಎಸ್/ಎಲ್/ಎಸ್/ಡಬ್ಲ್ಯೂ/ಸಿ/ಸಿ/. ದಿನಾಂಕ 04.10.2012ರ ಪ್ರಕಾರ) 12.26 ಗುಂಟೆ, ಮೆ: ಅನಂತ ರೆಸಿಡೆನ್ಸಿ(ರಿ) ಇವರಿಗೆ ಹೋಟೇಲ್ ಮತ್ತು ಮಲ್ಟಿ ಕುಷನ್ ರೆಸ್ಟೋರೆಂಟ್ ಸಲುವಾಗಿ (75ನೇ ಎಸ್/ಎಲ್/ಎಸ್/ಡಬ್ಲ್ಯೂ/ಸಿ/ಸಿ, ದಿನಾಂಕ: 04.10.2012ರ ಪ್ರಕಾರ) 02.00 ಗುಂಟೆ, ಮೆ: ತಿರುಮಲ್ ಎಂಟರ್‌ಪ್ರೈಜಿಸ್ ರವರಿಗೆ ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆ ಮಾಡಿದ್ದು (ಮಂಡಳಿ ಸಭೆ ದಿನಾಂಕ: 05.1.2013ರ ಪ್ರಕಾರ) 02.04 ಗುಂಟೆ, ಹೀಗೆ ಒಟ್ಟಾರೆಯಾಗಿ ಹೇಳುವುದಾದರೆ ಅವಶ್ಯಕವಿರುವ 587.21 ಎಕರೆ/ಗುಂಟೆಗಿಂತ ಹೆಚ್ಚಾಗಿ ರೈತರ ಜಮೀನನ್ನು ಸ್ವಾಧೀನ ಪಡಿಸಿಕೊಂಡು ತದನಂತರ ಖಾಸಗಿಯವರಿಗೆ ಖಾಸಗಿ ಉದ್ದೇಶಕ್ಕಾಗಿ ಹಂಚಿಕೆ ಮಾಡಿರುವುದು ಸಂಪೂರ್ಣ ಕಾನೂನಿನ ಉಲ್ಲಂಘನೆಯಾಗಿರುವುದು ಸ್ಪಷ್ಟ. ಹೆಚ್ಚಾಗಿ ಉಳಿದ ಜಮೀನನ್ನು ರೈತರಿಗೆ ಕೊಡಬೇಕೆ ವಿನಹ ಖಾಸಗಿಯವರಿಗೆ ಕೊಟ್ಟಿರುವುದು ತಪ್ಪು. ಇದಕ್ಕೆ ಕಾರಣರಾದಂತವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳಬೇಕೆನ್ನುವುದು ಸಮಿತಿಯು ಅಭಿಪ್ರಾಯವಾಗಿರುತ್ತದೆ.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ನಡೆದಿರುವ ಭ್ರಷ್ಟಾಚಾರ/ಅವ್ಯವಹಾರ/ಹಣ ದುರ್ಬಳಕೆ ಪ್ರಕರಣಗಳಿಗೆ ಸಂಬಂಧಿಸಿದ ಭರವಸೆಗಳನ್ನು ಅವಲೋಕಿಸಿದಾಗ ಪ್ರತಿಯೊಂದು ಇಲಾಖೆಗಳಲ್ಲಿಯೂ ಸಹ ಕೋಟ್ಯಾಂತರ ರೂಪಾಯಿಗಳಷ್ಟು ಭ್ರಷ್ಟಾಚಾರ/ಅವ್ಯವಹಾರ/ಹಣ ದುರ್ಬಳಕೆ ಪ್ರಕರಣಗಳು ನಡೆದಿದ್ದು, ಸದನದಲ್ಲಿ ಪ್ರಸ್ತಾಪಿಸುವವರೆಗೂ ಇಲಾಖಾಧಿಕಾರಿಗಳು ಇದನ್ನು ಗಮನಿಸಿ ತನಿಖೆಯನ್ನು ಕೈಗೊಳ್ಳದಿರುವುದು ಪ್ರಮುಖ ಅಂಶವಾಗಿರುತ್ತದೆ. ಸದರಿ ಪ್ರಕರಣಗಳನ್ನು ನಿಯಮಾವಳಿಗಳ ರೀತ್ಯಾ ಸಕಾಲದಲ್ಲಿ ನಿರ್ವಹಿಸದೆ ವಿಚಾರಣಾ ಹಂತದಲ್ಲಿಯೆ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದು ಪ್ರಕರಣಗಳ ತನಿಖೆಗೆ ಬೇಕಾದಂತಹ ಮೂಲ ಕಡತ/ದಾಖಲೆಗಳು ನಾಪತ್ತೆಯಾಗಿರುವುದು, ಕೆಲವೊಂದು ಇಲಾಖೆಯಲ್ಲಿ ಕಂಡುಬರುತ್ತದೆ. ಈ ವಿಚಾರ ಸಮಿತಿಯ ಗಮನಕ್ಕೆ ಬಂದಾಗ ಈ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿದ್ದು, ಇದುವರೆವಿಗೂ ಕ್ರಮ ಕೈಗೊಂಡಿರುವುದಿಲ್ಲ. ಕೆಲವೊಂದು ಪ್ರಕರಣಗಳಲ್ಲಿ ಲೋಕಾಯುಕ್ತಕ್ಕೆ ವಹಿಸಿ ಇಲಾಖೆಯಿಂದ ಯಾವುದೇ ಕ್ರಮ ಕೈಗೊಳ್ಳದೆ ಪ್ರಕರಣಗಳನ್ನು ವರ್ಷಾನುಗಟ್ಟಲೆ ತಳ್ಳಿರುವುದು ಇದಲ್ಲದೇ ತಪ್ಪಿತಸ್ಥ ಅಧಿಕಾರಿ/ನೌಕರರ ಮೇಲೆ ಯಾವುದೇ ಶಿಸ್ತು ಕ್ರಮಕೈಗೊಳ್ಳದೆ ಭ್ರಷ್ಟರು ಬಡ್ತಿ ಹಾಗೂ ನಿವೃತ್ತಿ ಸೇವಾ ಸೌಲಭ್ಯಗಳನ್ನು ಪಡೆದುಕೊಳ್ಳುವ ಹಂತದವರೆಗೆ ಪ್ರಕರಣಗಳನ್ನು ಮುಂದೂಡಲು ಸಹಕರಿಸಿರುವಂತಹ ಪ್ರಕರಣಗಳು ಶೇಕಡ 99% ರಷ್ಟು ಇದೆ. ಇಂತಹ ಪ್ರಕರಣಗಳನ್ನು ನಿಭಾಯಿಸಲು ಸರ್ಕಾರಿ ನೌಕರನ ದುರ್ನಡತೆ ಇಲಾಖಾ ನಿಯಾಮವಳಿಗಳ ಅಡಿ ದುರ್ನಡತೆಯಾಗಿ ಕ್ರಿಮಿನಲ್ ಕಾನೂನಿನಡಿ

ಅಪಾರಾಧವಾದರೆ ಇಲಾಖಾ ಶಿಸ್ತು ಕ್ರಮ ಮತ್ತು ಕ್ರಿಮಿನಲ್ ನಡವಳಿಗಳನ್ನು ಒಟ್ಟೊಟ್ಟಿಗೆ ನಡೆಸುವುದು ಅವಶ್ಯಕ. ನಿವೃತ್ತ ನೌಕರರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮ 214(2) (ಬಿ) (2)ರ ಅನ್ವಯ ಇಲಾಖಾ ವ್ಯವಹಾರಣೆಗಳನ್ನು ನೌಕರರು ಸೇವೆಯಲ್ಲಿದ್ದಾಗ ಹೂಡದಿದ್ದರೆ, ನಿವೃತ್ತಿ ಹೊಂದಿದ ನಾಲ್ಕು ವರ್ಷಗಳ ತರುವಾಯ ಹೂಡತಕ್ಕದ್ದಲ್ಲ ಎಂಬುದಾಗಿರುತ್ತದೆ. ಕೆ.ಸಿ.ಎಸ್.ಆರ್. ನಿಯಮ 214(ಎ) ಪ್ರಕಾರ ನಿವೃತ್ತಿ ನೌಕರನ ವಿರುದ್ಧ ಶಿಸ್ತು/ನ್ಯಾಯಿಕ ನಡವಳಿಕೆಗಳು ಅಂತ್ಯವಾಗುವವರೆಗೆ ನಿವೃತ್ತಿ ಉಪದಾನವನ್ನು ಸಂದಾಯ ಮಾಡತಕ್ಕದ್ದಲ್ಲ, ಕೆ.ಸಿ.ಎಸ್.ಆರ್.ನ 376(7)ರ ಪ್ರಕಾರ ನಿವೃತ್ತ ಸರ್ಕಾರಿ ನೌಕರನ ವಿರುದ್ಧ ಶಿಸ್ತು/ನ್ಯಾಯಾಂಗ ಕ್ರಮದಲ್ಲಿ ಅಂತಿಮ ತೀರ್ಮಾನವಾಗಿ, ಅಂತಿಮವಾಗಿ ನಿವೃತ್ತಿ ವೇತನ ಮಂಜೂರು ಆಗುವವರೆಗೆ ನಿವೃತ್ತಿ ವೇತನದ ಪರಿವರ್ತಿತ ಮೌಲ್ಯವನ್ನು ಮಂಜೂರು ಮಾಡುವಂತಿಲ್ಲ. ಇದಕ್ಕೆ ಸಂಬಂಧಿಸಿದಂತೆ ಆಗಸ್ಟ್, 2013ರಲ್ಲಿ ಸರ್ವೋಚ್ಚ ನ್ಯಾಯಾಲಯ ಜಾರ್ಖಂಡ್ ರಾಜ್ಯದ ವಿರುದ್ಧ ಜಿತೇಂದರ್ ಕುಮಾರ್ ಶ್ರೀವಾತ್ಸವ ಪ್ರಕರಣದ ತೀರ್ಪಿನಲ್ಲಿ ನಿವೃತ್ತಿ ವೇತನ ಸೇವಾವಧಿಯಲ್ಲಿ ನೌಕರ ಗಳಿಸಿದ ಆಸ್ತಿ. ಅದರಿಂದ, ಶಿಸ್ತು/ಕ್ರಿಮಿನಲ್ ನಡವಳಿಗಳು ಬಾಕಿ ಇದೆ ಎಂಬ ಕಾರಣಕ್ಕೆ ನಿವೃತ್ತಿ ವೇತನ ತಡೆಯುವಂತಿಲ್ಲ; ಆದರೆ, ಸಂಬಂಧಪಟ್ಟ ಸೇವಾ ನಿಯಮದಲ್ಲಿ ಅವಕಾಶವಿದ್ದರೆ "ನಿವೃತ್ತಿ ಸೌಲಭ್ಯಗಳನ್ನು ಶಿಸ್ತು/ಕ್ರಿಮಿನಲ್ ನಡವಳಿಗಳ ಫಲಿತಾಂಶಕ್ಕೆ ಒಳಪಟ್ಟು ತಡೆಹಿಡಿಯಬಹುದೆಂದು ಹೇಳಲಾಗಿದೆ". [ಕೆ.ಸಿ.ಎಸ್.ಆರ್. ನಿಯಮ 118ಎ(4), 214ಎ ಮತ್ತು 376(7)]

ಇಂತಹ ಪ್ರಕರಣಗಳನ್ನು ಒಟ್ಟಾರೆ ವಿಳಂಬ ಮಾಡುವುದರಿಂದ ಭ್ರಷ್ಟ ಅಧಿಕಾರಿಗಳು ಎಸಗಿರುವ ಆರೋಪ ಸಾಬೀತಾಗಿದ್ದರೂ ಸಹ ಕ್ರಮಕೈಗೊಳ್ಳದಿರುವಂತಹ ಸಂದರ್ಭಗಳನ್ನು ತಂದೊಡ್ಡಿರುತ್ತಾರೆ. ಕೆಸಿಎಸ್ಆರ್ ನಿಯಮ (214)(3)ರಲ್ಲಿ ಹಾಗೂ ಸಿಆರ್‌ಪಿಸಿ ಕಲಂ 368 ರಲ್ಲಿ ಆರೋಪಿತ ನೌಕರನು ನಿವೃತ್ತಿ ನಂತರವೂ ಸಹ ಆರೋಪ ಸಾಬೀತಾದ ಸಂದರ್ಭದಲ್ಲಿ ನಷ್ಟದ ಹಣವನ್ನು ವಸೂಲು (recovery) ಮಾಡಬಹುದೆಂದು ಸರ್ವೋಚ್ಚ ನ್ಯಾಯಾಲಯದ ಆದೇಶವಿರುತ್ತದೆ. ಅಲ್ಲದೆ ಲೋಕಾಯುಕ್ತಕ್ಕೆ ವಹಿಸಲಾದ ಪ್ರಕರಣಗಳು ಸುಮಾರು 15–20 ವರ್ಷಗಳಾದರೂ ಸಹ ತನಿಖೆ ಪೂರ್ಣಗೊಳ್ಳದೆ ಬಾಕಿಯಿರುತ್ತದೆ. ಇಲಾಖೆಯಲ್ಲಿನ ಭ್ರಷ್ಟಾಚಾರದ ಪ್ರಕರಣಗಳನ್ನು ಲೋಕಾಯುಕ್ತ ತನಿಖೆಗೆ ವಹಿಸುತ್ತಿರುವುದೇ ಭ್ರಷ್ಟ ಅಧಿಕಾರಿ/ನೌಕರರುಗಳಿಗೆ ಇದೊಂದು ವರದಾನವಾಗಿದೆ ಆದ್ದರಿಂದ ಈ ಬಗ್ಗೆ ಲೋಕಾಯುಕ್ತ ನಿಯಮಗಳಿಗೂ ಸೂಕ್ತ ತಿದ್ದುಪಡಿ ತರಲು ಸಮಿತಿ ಶಿಫಾರಸ್ಸು ಮಾಡುತ್ತದೆ. ಉದಾಹರಣೆಗೆ: ಉಡುಪಿ ನಗರಸಭೆಯಲ್ಲಿ ಕನಿಷ್ಠ ಟೆಂಡರ್ ಹೆಸರಿನಲ್ಲಿ ಮಾರುಕಟ್ಟೆ ಬೆಲೆಗಿಂತ 3 ರಿಂದ 6 ಪಟ್ಟು ಪಾಲು ಹೆಚ್ಚು ಬೆಲೆ ನೀಡಿ ಸರಕು ಖರೀದಿಯಲ್ಲಿ ನಡೆದ ಭ್ರಷ್ಟಾಚಾರ (ಭರವಸೆ ಸಂಖ್ಯೆ 1267/2002).

ಕೆಲವೊಂದು ಪ್ರಕರಣಗಳಲ್ಲಿ ಪ್ರಥಮ ತನಿಖಾ ವರದಿಯಲ್ಲಿ ಭ್ರಷ್ಟಾಚಾರ ಎಸಗಿರುವ ಆರೋಪ ಸಾಭೀತಾಗಿದ್ದರೂ ತದನಂತರ, ಲೋಕಾಯುಕ್ತ/ನ್ಯಾಯಾಲಯದಲ್ಲಿ ಬಾಕಿಯಿರುವಂತಹ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಇಲಾಖೆಯಿಂದ ಕಾಲಕಾಲಕ್ಕೆ ತನಿಖೆಗೆ ಬೇಕಾದ ದಾಖಲೆ/ಮಾಹಿತಿಗಳನ್ನು ಒದಗಿಸದೆ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದು ಮತ್ತು ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆ ತಂದಂತಹ ಪ್ರಕರಣಗಳಲ್ಲಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಸೂಕ್ತ ಸಮಯದಲ್ಲಿ ಸೂಕ್ತ ಕ್ರಮಕೈಗೊಳ್ಳದೆ ಇರುವುದರಿಂದ ಆರೋಪಿತ ಅಧಿಕಾರಿ/ನೌಕರರುಗಳು ನಿರ್ದೋಷಿತರೆಂದು ಪರಿಗಣಿಸಲ್ಪಟ್ಟಿದ್ದು, ಕಾಲಕಾಲಕ್ಕೆ ಬಡ್ತಿ ಹಾಗೂ ನಿವೃತ್ತಿ ಹಾಗೂ ಸೇವಾ ಸೌಲಭ್ಯಗಳನ್ನು ಪಡೆದಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿದೆ.

ಸರ್ಕಾರಿ ನೌಕರನ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ವಿಧಿಸಬಹುದಾದಂತಹ ದಂಡನೆಗಳ ಕುರಿತು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 8ರಲ್ಲಿ ನಿರ್ದಿಷ್ಟಪಡಿಸಲಾಗಿದೆ. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 383, 386 ಮತ್ತು 392ರಿಂದ 394ರ ಪ್ರಕಾರ ಸರ್ಕಾರಿ ನೌಕರ ಸರ್ಕಾರದ ಹಣ ದುರುಪಯೋಗ ಮಾಡಿದ ಅಥವಾ ಸರ್ಕಾರವನ್ನು ವಂಚಿಸಿದ ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆ ಕಡ್ಡಾಯ. ಅನುಚ್ಛೇದ 392ರ ಪ್ರಕಾರ ಕ್ರಿಮಿನಲ್ ಅಪರಾಧ ಶಂಕಿಸಿದ ಪ್ರಕರಣಗಳಲ್ಲಿ ತಕ್ಷಣ ಪೊಲೀಸರಿಗೆ ವರದಿ ಮಾಡತಕ್ಕದ್ದು.

ಆದಾಗ್ಯೂ ಆರೋಪ ಸಾಬೀತಾದಂತಹ ಪ್ರಕರಣಗಳಲ್ಲಿ ಭ್ರಷ್ಟಾಚಾರದ ಮೊತ್ತ ಕೋಟಿ ಕೋಟಿ ಇದ್ದಗೂ ಸಹ ಕನಿಷ್ಠ ಶಿಕ್ಷೆ ಎಂದರೆ ಒಂದು ಅಥವಾ ಎರಡು ವಾರ್ಷಿಕ ಬಡ್ತಿಯನ್ನು ತಡೆಹಿಡಿದು ಬೇರೆಡೆಗೆ ವರ್ಗಾವಣೆ ಮಾಡಿ ಪ್ರಕರಣವನ್ನು ಮುಕ್ತಾಯಗೊಳಿಸಿರುವುದು, ಹಣ ದುರುಪಯೋಗಪಡಿಸಿಕೊಂಡ ಪ್ರಕರಣಗಳಲ್ಲಿ ಹಣವನ್ನು ಸದರಿ ಅಧಿಕಾರಿ/ನೌಕರರಿಂದ ವಸೂಲು ಮಾಡಲಾಗಿದೆ ಎಂದು ತಿಳಿಸಿ ಅವರಿಗೆ ಬಡ್ತಿ ಹಾಗೂ ಸೇವಾ ಸೌಲಭ್ಯಗಳನ್ನು ನೀಡಿರುವುದು, ಇದಲ್ಲದೆ ಕೆಲವೊಂದು ಪ್ರಕರಣಗಳಲ್ಲಿ ಕೆಳಹಂತದ ನೌಕರರಿಗೆ ಶಿಕ್ಷೆ ವಿಧಿಸಿ ಮೇಲಿನ ಹಂತದ ಅಧಿಕಾರಿಗಳಿಗೆ (ಇಲಾಖಾ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ/ಇಲಾಖಾ ಮುಖ್ಯಸ್ಥರುಗಳಿಗೆ) ಯಾವುದೇ ಶಿಕ್ಷೆ ಆಗಿಲ್ಲದಿರುವುದನ್ನು ಸಮಿತಿಯು ಗಮನಿಸಿ ಆಕ್ಷೇಪವನ್ನು ವ್ಯಕ್ತಪಡಿಸಿರುತ್ತದೆ.

**ಇಂತಹ ಪ್ರಕರಣಗಳು ಸದನದಲ್ಲಿ ಪ್ರಸ್ತಾಪ ಮಾಡಿದಾಗ ಮಾತ್ರ ಬೆಳಕಿಗೆ ಬರುತ್ತಿರುವುದು ದುರದೃಷ್ಟಕರ ಸಂಗತಿಯಾಗಿರುತ್ತದೆ. ಮೇಲಿನ ಹಂತದ ಅಧಿಕಾರಿಗಳು ಇಂತಹ ವಿಷಯಗಳನ್ನು ಆಗಾಗ ಗಮನಿಸಿ ಅಲ್ಲಿಯೇ ಕ್ರಮ ಕೈಗೊಂಡರೆ ಇಂತಹ ಅನಾಹುತಗಳು ಆಗದಂತೆ ನೋಡಿಕೊಂಡರೆ ಸರ್ಕಾರದ ಬೊಕ್ಕಸಕ್ಕೆ ಆಗುವಂತಹ ನೂರಾರು ಕೋಟಿ ನಷ್ಟವನ್ನು ತಪ್ಪಿಸಬಹುದೆಂಬುದು ಸಮಿತಿಯ ಅಭಿಪ್ರಾಯವಾಗಿರುತ್ತದೆ.**

ಸುಮಾರು 20–23 ವರ್ಷಗಳಿಂದ ಅವ್ಯವಹಾರ ಪ್ರಕರಣದಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಳ್ಳದೆ ಬಾಕಿ ಉಳಿದಿರುವ ಹಿನ್ನೆಲೆಯಲ್ಲಿ ಸಮಿತಿಯು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಾರ್ವಜನಿಕರ ಹಣವನ್ನು ದುರುಪಯೋಗಪಡಿಸಿಕೊಂಡಂತಹ ಆರೋಪಿತ ಅಧಿಕಾರಿ/ನೌಕರರುಗಳು ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡಿಯೂ ಅನಾಯಾಸವಾಗಿ ಕಾನೂನಿನ ಹಿಡಿತದಿಂದ ಪಾರಾಗುತ್ತಿರುವಂತಹ ವ್ಯವಸ್ಥೆಯನ್ನು ಕೊನೆಗೊಳಿಸಲು ಹಾಗೂ ತಾಂಡವವಾಡುತ್ತಿರುವ ಭ್ರಷ್ಟಾಚಾರವನ್ನು ನಿಯಂತ್ರಿಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮಗಳು/ಆದೇಶ/ಸುತ್ತೋಲೆಗಳನ್ವಯ ಇಲಾಖಾ ವಿಚಾರಣೆಯನ್ನು ಕೈಗೊಂಡು ನಿಗದಿತ ಅವಧಿಯೊಳಗೆ ಶಿಸ್ತು ಕ್ರಮವನ್ನು ಕೈಗೊಳ್ಳಲು ವಿಫಲರಾದ ಸಂಬಂಧಪಟ್ಟ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಬೇಕೆಂದು ಸಮಿತಿಯು ನಿರ್ಣಯವನ್ನು ಕೈಗೊಂಡು ಸದರಿ ನಿರ್ಣಯವನ್ನು ಎಲ್ಲಾ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ದಿನಾಂಕ: 17.05.2016 ರಂದು ರವಾನಿಸಲಾಗಿದೆ. ಇದಲ್ಲದೆ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ 3 ತಿಂಗಳಿಗೊಮ್ಮೆ ಪ್ರಕರಣಗಳ ತನಿಖಾ ಪ್ರಗತಿಯ ಹಂತದ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಎಲ್ಲಾ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಬೇಕೆಂದು ಸೂಚಿಸಿ ಸಮಿತಿಯ ಅಧ್ಯಕ್ಷರಿಂದ ಪತ್ರವನ್ನು ಬರೆಯಲಾಗಿರುತ್ತದೆ. **ಆದರೆ, ಇಲ್ಲಿಯವರೆಗೆ ಯಾವುದೇ ಪ್ರಗತಿಯಾಗದಿರುವುದು ಸಮಿತಿಯ ಗಮನಕ್ಕೆ ಬಂದಿರುವುದಿಲ್ಲ. ಮತ್ತೆ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಕ್ರಮ ಕೈಗೊಳ್ಳದಿರುವುದು ಅತ್ಯಂತ ಗಂಭೀರವಾದಂತಹ ವಿಚಾರವೆಂದು ಸಮಿತಿಯ ಗಮನಕ್ಕೆ ಬಂದಿರುತ್ತದೆ.**

ರಾಜ್ಯದಲ್ಲಿನ ಭ್ರಷ್ಟಾಚಾರವನ್ನು ನಿಯಂತ್ರಿಸುವ ಸಲುವಾಗಿಯೆ ಸರ್ಕಾರವು ಲೋಕಾಯುಕ್ತ ಸಂಸ್ಥೆಯನ್ನು ರಚಿಸಿದ್ದು, ಉದಾಹರಣೆಗಾಗಿ ಸದರಿ ಸಂಸ್ಥೆಯಿಂದ ತನಿಖೆ ಮಾಡಲ್ಪಟ್ಟ ಲೋಕೋಪಯೋಗಿ ಇಲಾಖೆಯ ಭರವಸೆ ಸಂಖ್ಯೆ: 1409/2003-ನಂಜನಗೂಡಿನಲ್ಲಿ ನಿರ್ಮಿಸಿರುವ ಮಿನಿ ವಿಧಾನ ಸೌಧದ ಶಂಕು ಸ್ಥಾಪನೆಗೂ ಮುನ್ನವೇ ಕುಸಿದಿದ್ದು ದೋಷಪೂರಿತ ಕಟ್ಟಡ ನಿರ್ಮಾಣಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳದಿರುವುದು. ಸದರಿ ಕಟ್ಟಡವನ್ನು 1985ರಲ್ಲಿ ಕಟ್ಟಲಾಗಿದ್ದು, ಕಳಪೆ ಕಾಮಗಾರಿಯ ಹಿನ್ನಲೆಯಲ್ಲಿ ಕಟ್ಟಡದ ಉದ್ಘಾಟನೆ ಆಗುವುದಕ್ಕೂ ಮೊದಲೇ ಕಟ್ಟಡ ಬಿದ್ದು ಹೋಗಿದೆ ಎಂದು ಇಲಾಖೆಯವರೇ ವರದಿಯನ್ನು ಸಲ್ಲಿಸಿದ್ದರೂ ಸಹ ದಿನಾಂಕ: 31.08.1985ರಲ್ಲಿ ಲೋಕಾಯುಕ್ತದ ತನಿಖೆಗೆ ವಹಿಸಲ್ಪಟ್ಟ ಈ ಪ್ರಕರಣದಲ್ಲಿ 15.04.2014ರಂದು ಲೋಕಾಯುಕ್ತದ ಎ.ಡಿ.ಜಿ.ಪಿ. ಪೊಲೀಸ್ ವಿಂಗ್‌ರವರು 'ಬಿ' ರಿಪೋರ್ಟ್‌ನ್ನು ಕೊಟ್ಟಿರುವುದನ್ನು ನೋಡಿ ಸಮಿತಿಗೆ ದಿಗ್ಭ್ರಮೆ ಉಂಟಾಗಿರುತ್ತದೆ. ಈ ಪ್ರಕರಣದಲ್ಲಿ ಯಾವ ಆಧಾರದ ಮೇಲೆ ಲೋಕಾಯುಕ್ತ ಸಂಸ್ಥೆಯು 'ಬಿ' ರಿಪೋರ್ಟ್‌ನ್ನು ಸಲ್ಲಿಸಿದೆ ಎಂಬುದನ್ನು ಗಮನಿಸಿದಲ್ಲಿ ಸಂಸ್ಥೆಯಿಂದ ತನಿಖೆಯು ನ್ಯಾಯಸಮ್ಮತವಾಗಿ ನಡೆದಿರುವುದಿಲ್ಲವೆಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ಇಂತಹ ಪ್ರಕರಣದಲ್ಲಿಯೂ ಸಹ ಸರ್ಕಾರಿ ವಕೀಲರ ಮೂಲಕ ರಿವ್ಯೂ ಪಿಟೀಷನ್‌ನ್ನು ಸಹ ದಾಖಲಿಸದೇ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಪ್ರಶ್ನಿಸದೇ ಇರುವುದು ಬಹಳ ನೋವಿನ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ತನಿಖಾ ವರದಿಯ ಮಾಹಿತಿಯನ್ನು ಒದಗಿಸಬೇಕೆಂದು ದಿನಾಂಕ 16.12.2016ರಂದು ನಡೆದ ಸಮಿತಿ ಸಭೆಯಲ್ಲಿ ನಿಬಂಧಕರು, ಲೋಕಾಯುಕ್ತ ಇವರಿಗೆ ಸೂಚಿಸಲಾಗಿರುತ್ತದೆ. ಇದೇ ವಿಚಾರದಲ್ಲಿ ವಿಧಾನ ಪರಿಷತ್ತಿನ 134ನೇ ಅಧಿವೇಶನದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 74ಕ್ಕೆ ದಿನಾಂಕ: 06.02.2018ರಂದು ಮಾನ್ಯ ಲೋಕೋಪಯೋಗಿ ಸಚಿವರು ಉತ್ತರಿಸುತ್ತಾ I don't have any jurisdiction to question the autohrity of Lokayukta. Nonetheless the Government has taken a decision to file a suit in the Court against those have committed the mistake and are responsible for loss of Government money. A case has been filed it the Court ಎಂದು ತಿಳಿಸಿರುತ್ತಾರೆ.

ಲೋಕಾಯುಕ್ತಕ್ಕೆ ವಹಿಸಿದಂತಹ ಪ್ರಕರಣಗಳಲ್ಲಿಯೂ ಸಹ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದು ಹಾಗೂ ಲೋಕಾಯುಕ್ತದ ತನಿಖಾ ವರದಿಯಿಂದಲೂ ಸಹ ಸತ್ಯ ಹೊರ ಬರದಿರುವುದನ್ನು ಸಮಿತಿಯು ಮನಗಂಡಿದ್ದು, ನಿಬಂಧಕರು, ಲೋಕಾಯುಕ್ತ ಇವರನ್ನು ಸಹ ಸಭೆಗೆ ಆಹ್ವಾನಿಸಿ, ಪ್ರಕರಣಗಳನ್ನು ತ್ವರಿತಗತಿಯಲ್ಲಿ ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕೆಂದು ಸಹ ಸೂಚಿಸಲಾಗಿರುತ್ತದೆ. ಮೇಲ್ಕಂಡ ಪ್ರಕರಣಗಳಲ್ಲಿ ಅವಲೋಕಿಸಿದಾಗ ಸರ್ಕಾರ ಗಂಭೀರವಾಗಿ ಪರಿಗಣಿಸಿ ತ್ವರಿತಗತಿಯಲ್ಲಿ ಪ್ರಕರಣಗಳು ಇತ್ಯರ್ಥಗೊಳ್ಳುವಂತಾಗಲು ಲೋಕಾಯುಕ್ತ ಕಾನೂನಿಗೆ ತಿದ್ದುಪಡಿ ತರಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇಲ್ಲದಿದ್ದಲ್ಲಿ, ರಾಜ್ಯದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಲು ಯಾರಿಂದಲೂ ಸಾಧ್ಯವಾಗುವುದಿಲ್ಲ.

ಸರ್ಕಾರದ ಪ್ರತಿಯೊಂದು ಇಲಾಖೆಯಲ್ಲಿಯೂ ಭ್ರಷ್ಟಾಚಾರದ ಪ್ರಕರಣಗಳಿಗೆ ಸಂಬಂಧಿಸಿದ ಭರವಸೆಗಳಿದ್ದು ಅವು 15-20 ವರ್ಷಗಳಾದರೂ ಇತ್ಯರ್ಥವಾಗದೆ ಬಾಕಿ ಉಳಿದಿರುವುದನ್ನು ಗಮನಿಸಿದ ಸಮಿತಿಯು ಪ್ರತ್ಯೇಕವಾಗಿ ಇಲಾಖಾವಾರು ಪ್ರಕರಣಗಳನ್ನು ವಿಚಾರಣೆಗೆ ತೆಗೆದುಕೊಂಡು ನಿಬಂಧಕರು, ಲೋಕಾಯುಕ್ತ ಇವರನ್ನು ದಿನಾಂಕ: 16.12.2016ರ ಸಭೆಗೆ ಆಹ್ವಾನಿಸಿ ಚರ್ಚಿಸಲಾಗಿರುತ್ತದೆ. ಸದರಿ ಸಭೆಯಲ್ಲಿ ಮೇಲೆ ಉಲ್ಲೇಖಿಸಿರುವ ಪ್ರಕರಣಗಳು ಸೇರಿದಂತೆ ಚರ್ಚಿಸುವ ಸಂದರ್ಭದಲ್ಲಿ ನಿಬಂಧಕರಿಗೆ ಲೋಕಾಯುಕ್ತದಲ್ಲಿ ಪ್ರಕರಣಗಳು ಬಹಳಷ್ಟು ವರ್ಷದಿಂದ ಬಾಕಿ ಇರುವ ಬಗ್ಗೆ ಮತ್ತು ಆರೋಪ ಸಾಬೀತಾದ

ಪ್ರಕರಣಗಳಲ್ಲಿ 'ಬಿ' ರಿಪೋರ್ಟ್ ಸಲ್ಲಿಸಿರುವ ಬಗ್ಗೆ ಇದು ಹೇಗೆ ಸಾಧ್ಯವಾಯಿತೆಂದು ಪ್ರಶ್ನಿಸಿದಾಗ ನಿಬಂಧಕರು ಯಾವುದೇ ರೀತಿಯ ಉತ್ತರವನ್ನು ನೀಡುವಲ್ಲಿ ವಿಫಲರಾಗಿರುತ್ತಾರೆ. ಈ ಹಿನ್ನಲೆಯಲ್ಲಿ ಬಾಕಿ ಪ್ರಕರಣಗಳ ಪ್ರಗತಿಯ ಹಂತದ ವರದಿಯನ್ನು ಹಾಗೂ ತನಿಖಾ ವರದಿಯನ್ನು ಸಮಿತಿಯ ಅವಗಾಹನೆಗಾಗಿ ತರಬೇಕೆಂದು ಕೋರಲಾಯಿತು. ಇದಕ್ಕೆ ಉತ್ತರವಾಗಿ ಲೋಕಾಯುಕ್ತ ನಿಬಂಧಕರು ಕಾನೂನು ಹೇಳಿ ದಿನಾಂಕ 19.05.2017 ರಂದು ಪರಿಷತ್ತಿನ ಸಚಿವಾಲಯಕ್ಕೆ ಪತ್ರ ಬರೆದು ನಿಬಂಧಕರು, ಲೋಕಾಯುಕ್ತ ಇವರು ಕರ್ನಾಟಕ ನ್ಯಾಯಾಂಗ ಇಲಾಖೆಯ ಹಿರಿಯ ಜಿಲ್ಲಾ ನ್ಯಾಯಾಧೀಶರ ಹುದ್ದೆಯ ಅಧಿಕಾರಿಯಾಗಿದ್ದು ಭರವಸೆ ಸಮಿತಿಯ ಕಾರ್ಯವ್ಯಾಪ್ತಿಗೆ ಬರುವುದಿಲ್ಲವೆಂದು ಹಾಗೂ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 15 ಮತ್ತು ಕಲಂ 12(6)ಕ್ಕೆ ಅನುಗುಣವಾಗಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ನಿಬಂಧಕರಿಂದ ವಿವರಣೆ ಕೇಳುವ ಅಧಿಕಾರ ಸಮಿತಿಗೆ ಇಲ್ಲವೆಂದು ಸಮಿತಿಯ ಸಭೆಗೆ ಹಾಜರಾಗದೆ ಸಮಿತಿ ಬಯಸಿದ ಮಾಹಿತಿಯನ್ನು ನೀಡಲು ನಿರಾಕರಿಸಿರುತ್ತಾರೆ. ಅವರ ಈ ಧೋರಣೆಯ ಬಗ್ಗೆ ಸಮಿತಿಯು ಪರಿಶೀಲಿಸಿ ತೀವ್ರ ಅಸಮಾಧಾನ/ಆಕ್ಷೇಪವನ್ನು ವ್ಯಕ್ತಪಡಿಸಿರುತ್ತದೆ.

ಭಾರತ ಸಂವಿಧಾನದ ಅನುಚ್ಛೇದ 170 ಮತ್ತು 171ರ ಅನ್ವಯ ಸಂವಿಧಾನ ಬದ್ಧವಾಗಿ ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತು ರಚನೆಗೊಂಡಿದ್ದು ರಾಜ್ಯದಲ್ಲಿನ ಭ್ರಷ್ಟಾಚಾರವನ್ನು ನಿಯಂತ್ರಿಸಲೆಂದೇ ಉಭಯ ಸದನಗಳಿಂದ ಅಂಗೀಕೃತಗೊಂಡಿರುವ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಅನ್ವಯ ರಚನೆಗೊಂಡಿರುತ್ತದೆ. ಸಮಿತಿಗಳು ಸದನದ ಮುಂದುವರೆದ ಭಾಗವಾಗಿದ್ದು, ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಗೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 205ರ ಪ್ರಕಾರ ಸಾಕ್ಷ್ಯ ತೆಗೆದುಕೊಳ್ಳುವುದಕ್ಕೆ ಅಥವಾ ಕಾಗದಪತ್ರಗಳನ್ನು ಅಭಿಲೇಖನಗಳನ್ನು ಅಥವಾ ದಸ್ತಾವೇಜುಗಳನ್ನು ತರಿಸಿಕೊಳ್ಳಲು ಸಮಿತಿಗೆ ಅಧಿಕಾರವಿರುತ್ತದೆ. ಒಂದೆರಡು ಬಾರಿ ಸಮಿತಿಗೆ ಹಾಜರಾಗಿ ತದನಂತರ 19.05.201 ರಂದು ಆ ಸಮಿತಿಗೆ ಅಧಿಕಾರವಿಲ್ಲವೆಂದು ಹೇಳಿದ್ದರಿಂದ ಅದು ಎಷ್ಟರಮಟ್ಟಿಗೆ ಸರಿ ಎಂದು ಸಭೆಯಲ್ಲಿ ಚರ್ಚಿಸಲಾಗಿ ಇದಕ್ಕೆ ಸೂಕ್ತ ಉತ್ತರ ಹುಡುಕಲು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆಯಬೇಕೆಂದು ನಿರ್ಣಯಿಸಿ ಹಿನ್ನಲೆಯಲ್ಲಿ ಮತ್ತು ಈ ವಿಷಯವನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ ಸರ್ಕಾರದ ಗಮನಕ್ಕೆ ತರಬೇಕೆನ್ನುವ ಉದ್ದೇಶದಿಂದ ದಿನಾಂಕ 09.08.2017 ರಂದು ಸಮಿತಿಯ ಅಧ್ಯಕ್ಷನಾದ ನಾನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಅಭಿಪ್ರಾಯ ಕೋರಿ ಪತ್ರ ಬರೆದಿರುವುದಕ್ಕೆ ಉತ್ತರವಾಗಿ, ನಿಬಂಧಕರು, ಲೋಕಾಯುಕ್ತ ಇವರ ಪತ್ರಕ್ಕೆ ಅಡ್ವೋಕೇಟ್ ಜನರಲ್ ರವರಿಂದ ಅಭಿಪ್ರಾಯ ಪಡೆದು ಸದರಿ ಅಭಿಪ್ರಾಯದೊಂದಿಗೆ ದಿನಾಂಕ 19.1.2018 ರಂದು ನನಗೆ ಪತ್ರ ಬರೆದಿರುತ್ತಾರೆ ಹಾಗೂ ಅಡ್ವೋಕೇಟ್ ಜನರಲ್ ರವರು ನೀಡಿರುವ ಅಭಿಪ್ರಾಯದ ಸಂಬಂಧ ಸರ್ಕಾರದ ಹಂತದಲ್ಲಿ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಪರಿಶೀಲಿಸಲಾಗುತ್ತಿದೆಯೆಂದು ತಿಳಿಸಿರುತ್ತಾರೆ.

ನಿಬಂಧಕರು, ಲೋಕಾಯುಕ್ತ, ಇವರ ಪತ್ರವನ್ನು ಪರಿಶೀಲಿಸಿ ಅಡ್ವೋಕೇಟ್ ಜನರಲ್ ಇವರು ನೀಡಿರುವ ಅಭಿಪ್ರಾಯದ ಮುಖ್ಯಾಂಶ ಈ ಕೆಳಕಂಡಂತಿದೆ:

1. Government Assurance Committee, it may be necessary to summon and require the presence of different persons/officials of various Governmental departments, as well as **statutory authorities.**

**2.** The Lokayukta is required to share such information that is necessary for the functioning of Legislature Committees. The Legislature Committee is empowered to require, the presence of the Registrar, Karnataka Lokayukta in order to carryon its proceedings by following the due process of law.

3. The Committee is however always, at liberty keeping in mind the sensitivity of the case involved, to request the Lokayukta to investigate/enquire into the matter expeditiously. It can also ask for information of pending investigation.

4. Legislature can also amend Lokayukta Act 1984 in the manner to law and provide for strict time frames under the which investigation/enquiry must be completed by the Agency.

ಒಟ್ಟಾರೆ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯದ ಪ್ರಕಾರ

1. ಸಮಿತಿ ಸಭೆಗೆ ಲೋಕಾಯುಕ್ತ ನಿಬಂಧಕರನ್ನು ಕರೆಸಬಹುದಾಗಿದೆ,
2. ಸಮಿತಿ ಸಭೆಗೆ ಲೋಕಾಯುಕ್ತದಿಂದ ಪೂರಕ ಮಾಹಿತಿಗಳನ್ನು ಪಡೆಯಬಹುದಾಗಿದೆ.
3. ಲೋಕಾಯುಕ್ತದಲ್ಲಿ ವರ್ಷಾನುಗಟ್ಟಲೆಯಿಂದ ಇತ್ಯರ್ಥವಾಗದೆ ಬಿದ್ದಿರುವ ಕೇಸುಗಳ ಶೀಘ್ರ ವಿಲೇವಾರಿಗೆ ಕಾಲಾವಕಾಶ ನಿಗದಿ ಪಡಿಸಲು ಶಾಸಕಾಂಗ ಲೋಕಾಯುಕ್ತ ಕಾಯಿದೆಗೆ ಸೂಕ್ತ ತಿದ್ದುಪಡಿ ತರಬಹುದಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸಮಿತಿಯ ಲೋಕಾಯುಕ್ತ ಕಾಯಿದೆ 1984ಕ್ಕೆ ಆದಷ್ಟು ಶೀಘ್ರವಾಗಿ ತಿದ್ದುಪಡಿ ತರಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಿಸಿದ ಬಾಕಿಯಿರುವ ಭರವಸೆಗಳನ್ನು ಪರಿಶೀಲಿಸಲು ಕರೆಯಲಾಗಿದ್ದ ದಿನಾಂಕ: 24.08.2016ರ ಸಭೆಯಲ್ಲಿ ಭರವಸೆಗಳ ಸಂಖ್ಯೆ: 919 ಹಾಗೂ 2541 ಅಲಕ್ಷಿತಗೊಂಡಿರುವ ಗಡಿ ಪ್ರದೇಶದ ಗ್ರಾಮಗಳಿಗೆ ಹಾಗೂ ಕನ್ನಡ ಭಾಷೆಯ ರಕ್ಷಣೆಯ ಅಧ್ಯಯನ ಮಾಡಲು ನೇಮಿಸಿದ ಆಯೋಗದ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ಹಾಗೂ ರಾಜ್ಯದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕನ್ನಡ ಭವನದ ಬಗ್ಗೆ ಚರ್ಚಿಸುವಾಗ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಮಿತಿಗೆ ಒದಗಿಸಲಾಗಿದ್ದ ಲಿಖಿತ ಮಾಹಿತಿಯನ್ನು

ಪರಿಶೀಲಿಸುವಾಗ ಇಲಾಖೆಯಿಂದ ಸಮರ್ಪಕವಾದ ಉತ್ತರ ಬಾರದಿದ್ದ ಹಿನ್ನಲೆಯಲ್ಲಿ ಗಡಿ ಭಾಗದಲ್ಲಿ ಕೈಗೊಂಡಿರುವ ಅಭಿವೃದ್ಧಿಗಳ ಬಗ್ಗೆ ಖುದ್ದು ಪರಿಶೀಲಿಸಲು ಸಮಿತಿಯು ದಿನಾಂಕ: 6 ಮತ್ತು 7ನೇ ಅಕ್ಟೋಬರ್, 2016ರಂದು ಬೀದರ್, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಿಗೆ ಭೇಟಿ ನೀಡಿರುತ್ತದೆ.

ಗಡಿ ಭಾಗಗಳಿಗೆ ಇಲಾಖಾಧಿಕಾರಿಗಳೊಂದಿಗೆ ಭೇಟಿ ನೀಡಿ ಸ್ಥಳೀಯ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದಾಗ ಸಮಿತಿಯು ಗಮನಿಸಿದ ಪ್ರಮುಖವಾದ ಅಂಶಗಳೆಂದರೆ, ಭಾಷಿಕ ಬಿಕ್ಕಟ್ಟಿನ ಜೊತೆ ಸಾಮಾಜಿಕ ಹಾಗೂ ಅರ್ಥಿಕ ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಗಡಿಭಾಗಗಳ ಜನರ ಕಲ್ಯಾಣಕ್ಕಾಗಿ ಹಾಗೂ ಸರ್ವೋತೋಮುಖ ಅಭಿವೃದ್ಧಿಗಾಗಿ ಗಡಿ ತಾಲ್ಲೂಕೆಂದು ಗುರುತಿಸಲ್ಪಟ್ಟ 52 ತಾಲ್ಲೂಕುಗಳಿಗೆ ರಾಜ್ಯ ಆಯವ್ಯಯದಲ್ಲಿ ಗಡಿನಾಡ ಅಭಿವೃದ್ಧಿಗಾಗಿ 1990-1991ನೇ ಸಾಲಿನಿಂದ 1999-2000ರವರೆಗೆ 9101.250 ಲಕ್ಷ ರೂಪಾಯಿ ಸರ್ಕಾರ ಬಿಡುಗಡೆ ಮಾಡಿದೆ. ಅಲ್ಲದೇ, 2009-10ರಲ್ಲಿ ಕರ್ನಾಟಕ ಗಡಿ ಪ್ರದೇಶ ಪ್ರಾಧಿಕಾರ ರಚಿಸಲಾಗಿ, 2015-16ರಲ್ಲಿ ಸದರಿ ಪ್ರಾಧಿಕಾರಕ್ಕೆ ರೂ. 25.00 ಕೋಟಿ ಅನುದಾನ ನಿಗದಿಪಡಿಸಿ ಒಂದನೇ ಕಂತು ರೂ. 6.25 ಕೋಟಿ ಬಿಡುಗಡೆ ಮಾಡಿದೆ. ಸರ್ಕಾರ ಅಧ್ಯತೆ ಮೇಲೆ ಅನುದಾನ ಒದಗಿಸಿದ್ದರೂ ಸದರಿ ಅನುದಾನಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಗಡಿ ಅಭಿವೃದ್ಧಿ ಪ್ರಾಧಿಕಾರದಿಂದ ಸದ್ಬಳಕೆಯಾಗದೆ ದುರುಪಯೋಗಪಡಿಸಿಕೊಂಡಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ಹೊರಡಿಸಲಾಗಿರುವ ಮಾರ್ಗಸೂಚಿಗಳ ಅನ್ವಯ ಕಾಮಗಾರಿಗಳನ್ನು ನಿರ್ವಹಿಸಿರುವುದಿಲ್ಲ. ಬೀದರ್ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿ, ಸೂಪರಿಂಡೆಂಟ್ ಹಾಗೂ ಉಪ ಸೂಪರಿಂಡೆಂಟ್ ಆಫ್ ಪೋಲೀಸ್ ಯಾವ ಅಧಿಕಾರಿಯೂ ಸಮಿತಿ ಸಭೆಯ ಬಗ್ಗೆ ತಲೆಕೆಡಿಸಿಕೊಳ್ಳದೇ ಯಾವುದೇ ಮಾಹಿತಿಯನ್ನು ಒದಗಿಸುವಲ್ಲಿ ವಿಫಲವಾದ ಬಗ್ಗೆ ಸಮಿತಿಯು ತನ್ನ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತದೆ.

ಸರ್ಕಾರವು ಆಧ್ಯತೆ ಮೇರೆಗೆ ಗಡಿ ಭಾಗದ ಹಿಂದುಳಿದ ಜಿಲ್ಲೆ/ತಾಲ್ಲುಕುಗಳ ಅಭಿವೃದ್ದಿಗಾಗಿ ಸಾಕಷ್ಟು ಅನುದಾನವನ್ನು ಒದಗಿಸಿದ್ದರೂ ಸದ್ಬಳಕೆ ಮಾಡದೇ ನಕಲಿ ದಾಖಲೆಗಳ ಆಧಾರದ ಮೇಲೆ ಹಣ ದುರುಪಯೋಗವಾಗಿರುವ ಬಗ್ಗೆ ಮತ್ತು ಅನುದಾನವನ್ನು ಒದಗಿಸಿರುವ ಎಲ್ಲಾ ಪ್ರಕರಣಗಳಲ್ಲಿಯೂ ಸಮಗ್ರವಾದ ತನಿಖೆಯನ್ನು ನಡೆಸಲು ದಿನಾಂಕ: 19.11.2016ರಂದು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ಸಮಿತಿಗೆ ವರದಿ ನೀಡಲು ಸೂಚಿಸಲಾಗಿರುತ್ತದೆ. ಆದರೆ, ಕೈಕೊಂಡ ಕ್ರಮದ ಬಗ್ಗೆ ಈವರೆವಿಗೂ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ.

ಎರಡನೆಯದಾಗಿ, ಸಣ್ಣ ನೀರಾವರಿ ಇಲಾಖೆಯ ಭರವಸೆ ಸಂಖ್ಯೆ: 313/1994 "ಕನಕಪುರ ತಾಲ್ಲೂಕಿನ ರಾವುತನಹಳ್ಳ ನೀರಾವರಿ ಯೋಜನೆಯಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ ತನಿಖೆ ನಡೆಸಲು ಲೋಕಾಯುಕ್ತಕ್ಕೆ ವಹಿಸುವುದಾಗಿ ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ದಿನಾಂಕ: 03.09.1994ರಂದು ಭರವಸೆಯನ್ನು ನೀಡಿರುತ್ತಾರೆ. ಸದರಿ ಯೋಜನೆಯಲ್ಲಿ ನಡೆದಿರುವ ಅವ್ಯವಹಾರದ ಮೊತ್ತ ರೂ.3,36,99,176/-ಗಳ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ 27 ಅಧಿಕಾರಿ/ನೌಕರರುಗಳ ಪರವಾಗಿ 10 ಅಧಿಕಾರಿ/ನೌಕರರುಗಳ ವಿರುದ್ಧ ಸಿವಿಲ್ ದಾವೆ ಹೂಡಲು ದಿನಾಂಕ: 28.05.2012ರಂದು ಆದೇಶ ಹೊರಡಿಸಿದೆ. ಉಳಿದಂತೆ 10 ಅಧಿಕಾರಿ ನೌಕರರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ದಿನಾಂಕ: 18.12.2013ರಲ್ಲಿ ಪ್ರಕರಣವನ್ನು ಲೋಕಾಯುಕ್ತಕ್ಕೆ ವಹಿಸಲಾಗಿದೆ. ಲೋಕಾಯುಕ್ತರಿಂದ ವಿಚಾರಣಾ ವರದಿ ಈವರೆವಿಗೂ ಸ್ವೀಕೃತವಾಗಿರುವುದಿಲ್ಲ. ಈ ಪ್ರಕರಣದಲ್ಲಿ 23 ವರ್ಷ ಕಳೆದರೂ ಸಹ ಯಾವುದೇ ಪ್ರಗತಿ ಕಂಡುಬಂದಿರುವುದಿಲ್ಲ. ಪ್ರತಿ ತಿಂಗಳು ನಿವೃತ್ತ ನೌಕರರು ನಿವೃತ್ತಿ ವೇತನವನ್ನು ಪಡೆಯುತ್ತಿದ್ದಾಗ್ಯೂ ಕೆಲವು ನಿವೃತ್ತ ನೌಕರರ ವಿಳಾಸ ಪತ್ತೆಯಾಗದ ಕಾರಣ

ಈವರೆವಿಗೂ ನೋಟಿಸ್ ಜಾರಿಗೊಳಿಸಲಾಗಿಲ್ಲವೆಂದು ಇಲಾಖೆಯವರು ನೀಡಿದ ಉತ್ತರವು ಬಹಳ ಅಘಾತಕಾರಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಮಿತಿಯು ದಿನಾಂಕ: 02.05.2017ರಂದು ಕನಕಪುರ ತಾಲ್ಲೂಕಿಗೆ ಭೇಟಿ ನೀಡಿ ರಾವುತನಹಳ್ಳ ನೀರಾವರಿ ಯೋಜನೆಯನ್ನು ಖುದ್ದಾಗಿ ಪರಿಶೀಲಿಸಿ ಲೋಪಗಳನ್ನು ಗಮನಿಸಿ ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದರೂ ಈ ಪ್ರಕರಣದಲ್ಲಿ 23 ವರ್ಷ ಕಳೆದರೂ ಯಾವುದೇ ಕ್ರಮ ಜರುಗಿಸಿಲ್ಲದಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ, ಯಾವ ಯಾವ ಹಂತದಲ್ಲಿ ತಪ್ಪಾಗಿದೆ, ಇದಕ್ಕೆ ಕಾರಣಕರ್ತರಾದ ಅಧಿಕಾರಿಗಳ ಮೇಲೆ ಸೂಕ್ತ ಶಿಸ್ತು ಕ್ರಮ ಜರುಗಿಸಬೇಕೆಂದು ಸಮಿತಿ ಶಿಫಾರಸ್ಸು ಮಾಡಿರುತ್ತದೆ.

ಸಮಿತಿಯು ನಗರಾಭಿವೃದ್ದಿ ಇಲಾಖೆಗೆ ಸಂಬಂಧಿಸಿದ ಭರವಸೆ ಸಂಖ್ಯೆ:5356/2015ರ "ನಗರದಲ್ಲಿ ದಿನಂಪ್ರತಿ ಸಂಗ್ರಹವಾಗುವ ತ್ಯಾಜ್ಯದ ವಿಂಗಡಣಾ ಕಾರ್ಯಕ್ಕೆ ಒತ್ತು ನೀಡುವ ಬಗ್ಗೆ ತ್ಯಾಜ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಮರು ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಶಾಶ್ವತ ಪರಿಹಾರ ಕೈಗೊಳ್ಳುವ" ಕುರಿತು ದಿನಾಂಕ: 04.10.2017 ರಂದು ಮಂಡೂರು ತ್ಯಾಜ್ಯ ವಿಲೇವಾರಿ ಹಾಗೂ ಸಂಸ್ಕರಣ ಘಟಕಕ್ಕೆ ಭೇಟಿ ನೀಡಿ ಸ್ಥಳ ಪರಿವೀಕ್ಷಣೆ ನಡೆಸಿರುತ್ತದೆ. ತದನಂತರ ಮಂಡೂರಿನ ತ್ಯಾಜ್ಯ ಸಂಸ್ಕರಣಾ ಘಟಕದ ಯೋಜನೆಯು ಸ್ಥಗಿತಗೊಂಡಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದ್ದು, ಆ ಸಂದರ್ಭದಲ್ಲಿ ಬಿ.ಬಿ.ಎಂ.ಪಿ ಆಯುಕ್ತರು ನೀಡಿದ ಮಾಹಿತಿಯ ಮೇರೆಗೆ ಸಮಿತಿಯು ಈ ಕೆಳಕಂಡ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿರುತ್ತದೆ. ಮಂಡೂರಿನಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ (ವೇಸ್ಟ್-ಟು-ಎನರ್ಜಿ) ಘಟಕವು ಒಪ್ಪಂದದ ಪ್ರಕಾರ ಏಪ್ರಿಲ್-2007ರಲ್ಲಿ ಕಾರ್ಯಾರಂಭ ಆಗಬೇಕಿದ್ದರೂ, ಈ ಯೋಜನೆಗಾಗಿ ಫೆಬ್ರುವರಿ 2014ರ ವೇಳೆಗೆ ರೂ.73.34 ಕೋಟಿ ವೆಚ್ಚ ಮಾಡಿದ್ದರೂ, ಈ ಘಟಕವು ಕಾರ್ಯಾರಂಭಗೊಳ್ಳದೆ ಸ್ಥಗಿತಗೊಂಡಿರುವುದು ಹಾಗೂ ಉತ್ಪಾದನಾ ಘಟಕದಲ್ಲಿ ಸ್ಥಾಪಿಸಲಾದ ಯಂತ್ರೋಪಕರಣಗಳು ಬಳಕೆಯಾಗದೆ ನಿರುಪಯುಕ್ತವಾಗಿರುವ ಬಗ್ಗೆ ಸಮಿತಿಯು ತೀವ್ರವಾದ ಅಸಮಾಧಾನವನ್ನು ವ್ಯಕ್ತಪಡಿಸಿ, ಈ ಘಟಕವನ್ನು ಪುನರಾರಂಭಿಸಲು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿರುತ್ತದೆ.

ಮೊದಲನೆಯದಾಗಿ, ಸರ್ಕಾರವು ಮೆ:ಗಾಯತ್ರಿ ಶ್ರೀನಿವಾಸ ಸಂಸ್ಥೆಯೊಂದಿಗೆ 2002ರಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡಿದ್ದು, 2 ವರ್ಷ 7 ತಿಂಗಳ ಕಾಲ ಒಪ್ಪಂದ ಮಾಡಿಕೊಳ್ಳಲು ಸಮಯವನ್ನು ತೆಗೆದುಕೊಂಡು ಒಪ್ಪಂದವಾದ 3 ವರ್ಷದ ನಂತರ ಬೇಕಾದ ಭೂ ಮತ್ತು ಪರಿಸರ ಇಲಾಖೆಯ ಅನುಮತಿ ನೀಡಲಾಗಿರುತ್ತದೆ. ಅಂದರೆ, ಕರಾರು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಿಕ್ಕೆ ಒಟ್ಟು 5 ವರ್ಷ 7 ತಿಂಗಳುಗಳನ್ನು ತೆಗೆದುಕೊಳ್ಳಲಾಗಿದೆ. ಈ ಮಧ್ಯೆ 2008ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಮ್ಯಾನೇಜರ್, ಇಂಡಿಯನ್ ಬ್ಯಾಂಕ್, ಇವರಿಗೆ ಪತ್ರ ಬರೆದು ಮೆ: ಗಾಯತ್ರಿ ಶ್ರೀನಿವಾಸ ಸಂಸ್ಥೆಯವರಿಗೆ ಬ್ಯಾಂಕ್ ಸಾಲವನ್ನು ಅಂದರೆ ಮುಂದಿನ ಹಣಕಾಸು ಸಹಾಯವನ್ನು ನಿಲ್ಲಿಸುವಂತೆ ಪತ್ರವನ್ನು ಬರೆದಿರುವುದು ಹಾಗೂ ಸರ್ಕಾರದಿಂದ ಈ ಸಂಸ್ಥೆಗೆ ಬಿಡುಗಡೆ ಮಾಡಬೇಕಾಗಿರುವ ಬಾಕಿ ಮೊತ್ತ ರೂ.13.30 ಕೋಟಿ ಮತ್ತು ಬಡ್ಡಿಯನ್ನು ಬಿಡುಗಡೆ ಮಾಡದೆ ಸದರಿ ಸಂಸ್ಥೆಯವರಿಗೆ ಕೆಲಸ ನಿರ್ವಹಣೆಗೆ ತೊಂದರೆಯನ್ನುಂಟು ಮಾಡಿರುವುದು ಖಂಡನೀಯವಾಗಿದ್ದು, ಈ ಮಧ್ಯೆ ಸಕಾಲದಲ್ಲಿ ಯೋಜನೆಯನ್ನು ಪೂರ್ಣಗೊಳಿಸಲಿಲ್ಲ ಎನ್ನುವ ಕಾರಣವನ್ನು ನೀಡಿ 2014ರಲ್ಲಿ ಟರ್ಮಿನೇಶನ್ ಆರ್ಡರ್‌ನ್ನು ನೀಡಿರುವುದು ಎಷ್ಟು ಸಮಂಜಸವೆಂಬುದು ಸಮಿತಿಯ ಪ್ರಶ್ನೆಯಾಗಿರುತ್ತದೆ.

ಎರಡನೆಯದಾಗಿ, ತ್ಯಾಜ್ಯ ವಿಲೇವಾರಿ ಘಟಕ ಸ್ಥಗಿತಗೊಳ್ಳಲು ಹಾಗೂ ಸ್ಥಳೀಯರ ವಿರೋಧಕ್ಕೆ ಕಾರಣ ಬಿ.ಬಿ.ಎಂ.ಪಿಯವರು ಒಪ್ಪಂದದ ಪ್ರಕಾರ 600 ಟನ್ ಕಸ ಡಂಪ್ ಮಾಡುವ ಬದಲಿಗೆ 2400 ಟನ್ ಕಸವನ್ನು ಡಂಪ್ ಮಾಡಿರುವುದು ಹಾಗೂ ಇದರಿಂದ ತ್ಯಾಜ್ಯ ಸಂಗ್ರಹಣೆ ಜಾಸ್ತಿಯಾಗಿ ಲಿಜಿಡ್ ಸಂಗ್ರಹಣೆಯಿಂದ ಪರಿಸರ ಮಾಲಿನ್ಯವಾಗಿ ಸ್ಥಳೀಯರ ವಿರೋಧಕ್ಕೆ ಕಾರಣವಾಗಿರುವುದನ್ನು ಸಮಿತಿಯು ಗಮನಿಸಿರುತ್ತದೆ. ಸದರಿ ಸಂಸ್ಥೆಯವರು ಸಿಂಗಪೂರ್ ಮತ್ತು ಚೈನಾ ದೇಶದಲ್ಲಿ ಇಂತಹ ಯೋಜನೆಗಳಿಗೆ ಸರ್ಕಾರವೇ ಹಣ ಹೂಡಿರುವುದು ಉದಾಹರಣೆ ಇದ್ದು, ಇಲ್ಲಿ ಮೆ:ಗಾಯತ್ರಿ ಶ್ರೀನಿವಾಸ ಸಂಸ್ಥೆಯಂತಹವರು ಸ್ವತಃ ಹಣವನ್ನು ಇನ್‌ವೆಸ್ಟ್ ಮಾಡಿ ರಾಜ್ಯಕ್ಕೆ ಕೊಡುಗೆ ನೀಡಲು ಮುಂದೆ ಬಂದಿದರೂ ಬಿ.ಬಿ.ಎಂ.ಪಿಯವರು ಪ್ರತಿಯೊಂದು ಹಂತದಲ್ಲಿಯೂ ಅವರಿಗೆ ಪ್ರೋತ್ಸಾಹ ಮತ್ತು ಸಹಕಾರ ನೀಡದೇ ಸಂಸ್ಥೆಯ ಆರ್ಥಿಕ ಮುಗ್ಗಟ್ಟಿಗೆ ಹಾಗೂ ಸದರಿ ಯೂನಿಟ್ ಸ್ಥಗಿತಗೊಳ್ಳಲು ಬಿ.ಬಿ.ಎಂ.ಪಿಯೇ ಮುಖ್ಯ ಕಾರಣಕರ್ತರಾಗಿರುವುದಕ್ಕೆ ಸಮಿತಿಯು ಆಕ್ಷೇಪವನ್ನು ವ್ಯಕ್ತಪಡಿಸುತ್ತದೆ.

ಮೆ:ಗಾಯತ್ರಿ ಶ್ರೀನಿವಾಸ ಸಂಸ್ಥೆಯವರು ಸರ್ಕಾರ ರದ್ದುಪಡಿಸಿರುವ ಪರವಾನಿಗೆಯನ್ನು ನೀಡುವಂತೆ ಹಾಗೂ ಬಾಕಿಯಿರುವ ಮೊತ್ತವನ್ನು ಸಂದಾಯ ಮಾಡಿದರೆ, ಘಟಕವನ್ನು ಪುನರ್ ಆರಂಭಿಸಿ ಬೆಂಗಳೂರಿನ ಕಸ ಸಮಸ್ಯೆ ನಿವಾರಣೆ ಮಾಡುವ ಕೆಲಸ ಮಾಡುವುದಾಗಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುವುದಾಗಿ ತಿಳಿಸಿದ್ದು, ಈ ಕುರಿತು ಸಭೆಯಲ್ಲಿ ಹಾಜರಿದ್ದ ಬಿ.ಬಿ.ಎಂ.ಪಿ ಆಯುಕ್ತರು, ಮೆ:ಗಾಯತ್ರಿ ಶ್ರೀನಿವಾಸ ಸಂಸ್ಥೆಯವರು ಸರ್ಕಾರಕ್ಕೆ ಮನವಿಯನ್ನು ಕೊಟ್ಟಿರುತ್ತಾರೆಂದು ತಿಳಿಸುತ್ತಾ, ಅದರ ಆಧಾರದ ಮೇಲೆ ಸರ್ಕಾರವು ವರದಿಯನ್ನು ಕೇಳಿರುವುದರಿಂದ, ಈ ಬಗ್ಗೆ ಕೂಲಂಕಷವಾಗಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದೆಂದು ಸಮಿತಿಗೆ ತಿಳಿಸಿರುತ್ತಾರೆ.

ಬೆಂಗಳೂರಿನಲ್ಲಿ ಕಸ ವಿಲೇವಾರಿ ಸಮಸ್ಯೆಯು ಬೃಹತ್ ಮಟ್ಟದ ಸಮಸ್ಯೆಯಾಗಿದ್ದು, ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಈ ಯೋಜನೆಯನ್ನು ಪುನರ್ ಆರಂಭಿಸಲು ಮುಂದೆ ಬಂದಿರುವಂತಹ ಮೆ: ಗಾಯಿತ್ರಿ ಶ್ರೀನಿವಾಸ ಸಂಸ್ಥೆಯವರಿಗೆ ಪರವಾನಗಿ ನೀಡಿ ಕೆಲಸವನ್ನು ಮಾಡಲು ಎಲ್ಲಾ ರೀತಿಯಿಂದಲೂ ಸರ್ಕಾರವು ಸಹಕರಿಸಬೇಕಾಗಿರುತ್ತದೆ. ಈ ಕುರಿತು ಸಚಿವ ಸಂಪುಟ ಸಭೆಗೆ ಇಲಾಖೆಯು ಪೂರಕ ವರದಿಯನ್ನು ಸಲ್ಲಿಸಿ ಮಂಡೂರು ಕಸ ವಿಲೇವಾರಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಈ ನಿಟ್ಟಿನಲ್ಲಿ ಬಿ.ಬಿ.ಎಂ.ಪಿ ಆಯುಕ್ತರು, ತ್ವರಿತ ಗತಿಯಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ, ವೈಜ್ಞಾನಿಕವಾದ ರೀತಿಯಲ್ಲಿ ತ್ಯಾಜ್ಯ ವಿಲೇವಾರಿಯನ್ನು ಕೈಗೊಂಡು ಮಂಡೂರಿನ ವೇಸ್ಟ್-ಟು-ಎನರ್ಜಿ ಘಟಕವನ್ನು ಪ್ರಾರಂಭಿಸಲು ಸರ್ಕಾರದ ವತಿಯಿಂದ ಪೂರಕವಾದ ಸಹಕಾರವನ್ನು ನೀಡಬೇಕೆಂದು ಹಾಗೂ ಈ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಸಮಿತಿಗೆ ಮಾಹಿತಿ ಒದಗಿಸುವಂತೆ ಕೋರಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರಿಗೆ ದಿನಾಂಕ 19.01.2018 ರಂದು ಪತ್ರವನ್ನೂ ಸಹ ಬರೆಯಲಾಗಿರುತ್ತದೆ.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಭರವಸೆ ಸಂಖ್ಯೆ:3159/2009 ಹಾಗೂ 1500/2003ಕ್ಕೆ ಸಂಬಂಧಿಸಿದಂತೆ, ದಿನಾಂಕ: 12.10.2017 ಮತ್ತು 13.10.2017ರಂದು ಸಮಿತಿಯು ಶ್ರೀ ವೆಂಕಟೇಶ್ವರ ಕೋ-ಆಪರೇಟಿವ್ ಟೆಕ್ಸ್‌ಟೈಲ್ ಮಿಲ್ ನಿಯಮಿತ, ಅಣ್ಣಿಗೇರಿ ಮತ್ತು ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್

ಬ್ಯಾಂಕ್ ನಿಯಮಿತ, ಧಾರವಾಡ, ಮಲಪ್ರಭ ಸಹಕಾರಿ ನೂಲಿನ ಗಿರಣಿ ನಿಯಮಿತ, ಸವದತ್ತಿ, ಬೆಳಗಾವಿ, ದಿ:ಫಾರ್ಮರ್ಸ್ ಕೋ-ಆಪರೇಟಿವ್ ಸ್ಪಿನ್ನಿಂಗ್ ಮಿಲ್ ನಿಯಮಿತ, ಗದಗ ಮತ್ತು ತುಂಗಭದ್ರ ರೈತರ ಸಹಕಾರಿ ನೂಲಿನ ಗಿರಣಿ ನಿಯಮಿತ, ರಾಣಿಬೆನ್ನೂರು, ಹಾವೇರಿ ಜಿಲ್ಲೆಗಳಿಗೆ ಭೇಟಿ ನೀಡಿ ರಾಜ್ಯದಲ್ಲಿನ ಸಹಕಾರಿ ನೂಲಿನ ಗಿರಣಿಗಳು ನಷ್ಟವನ್ನು ಅನುಭವಿಸುತ್ತಿರುವ ಬಗ್ಗೆ ಇಲಾಖಾಧಿಕಾರಿಗಳು ಮಿಲ್‌ನ ಅಧ್ಯಕ್ಷರು ಹಾಗೂ ನಿರ್ದೇಶಕರೊಂದಿಗೆ ಚರ್ಚಿಸಲಾಯಿತು. ರೈತರ ಸಂಕಷ್ಟ ನಿವಾರಣೆಗೆ ಹಾಗೂ ರೈತರಿಗೆ ನೆರವಾಗಲು ತಲೆಯೆತ್ತಿರುವ ಈ ಗಿರಣಿಗಳನ್ನು ಉಳಿಸಿ ಬೆಳೆಸಬೇಕೆಂಬ ಆಶಯ ವ್ಯಕ್ತಪಡಿಸುತ್ತಾ ಡಿಸೆಂಬರ್, 15ರವರೆಗೆ ಕಾಲಾವಕಾಶವನ್ನು ನೀಡಿ ಸದರಿ ಮಿಲ್‌ಗಳ ಪುನಶ್ಚೇತನಗೊಳಿಸಲು ಅಥವಾ ಲೀಸ್‌ಗೆ ನೀಡಲು ಇರುವ ಷರತ್ತು ಮತ್ತು ನಿಬಂಧನೆಗಳೊಂದಿಗೆ ಪರಿಶೀಲಿಸಿ ಸಮಿತಿಗೆ ಸಮಗ್ರ ವರದಿಯನ್ನು ಸಲ್ಲಿಸಲು ಜವಳಿ ಆಯುಕ್ತರಿಗೆ ನಿರ್ದೇಶನ ನೀಡಲಾಗಿರುತ್ತದೆ. ದಿನಾಂಕ: 26.12.2017ರಂದು ನಡೆದ ಸಮಿತಿ ಸಭೆಯಲ್ಲಿ ಸದರಿ ವಿಷಯವನ್ನು ಸಚಿವ ಸಂಪುಟದ ಗಮನಕ್ಕೆ ತಂದು ಮುಂದಿನ ಕ್ರಮಕೈಗೊಳ್ಳಲು ಸಮಿತಿಯು ತೀರ್ಮಾನಿಸಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಸಮಿತಿಯು ಪಂಜಾಬ್, ರಾಜಸ್ತಾನ, ಹಿಮಾಚಲ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಅಧ್ಯಯನ ಪ್ರವಾಸ ಕೈಗೊಂಡಿರುತ್ತದೆ.

2016-17ನೇ ಸಾಲಿನಲ್ಲಿ ರಚಿಸಲಾದ ಭರವಸೆಗಳ ಸಮಿತಿಯು ಒಟ್ಟಾರೆ 34 ಇಲಾಖೆಗಳಿಗೆ ಸಂಬಂಧಿಸಿದಂತೆ ಒಟ್ಟು 74 ಸಭೆಗಳನ್ನು ನಡೆಸಿ, 1379 ಭರವಸೆಗಳನ್ನು ಸರ್ಕಾರದಿಂದ ನೀಡಲಾದ ಉತ್ತರದ ಮೇರೆಗೆ ಇಲಾಖಾಧಿಕಾರಿಗಳೊಂದಿಗೆ ಸಮಗ್ರವಾಗಿ ಚರ್ಚಿಸಿ 957 ಭರವಸೆಗಳನ್ನು ಮುಕ್ತಾಯಗೊಳಿಸಿರುತ್ತದೆ. ಅಲ್ಲದೆ, ದಿನಾಂಕ: 06.01.2017ರಂದು ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಮತ್ತು ದಿನಾಂಕ: 04.04.2017ರಂದು ಆರ್ಥಿಕ ಇಲಾಖೆಗಳ ಭರವಸೆಗಳು ಸಂಪೂರ್ಣವಾಗಿ ಮುಕ್ತಾಯಗೊಂಡಿರುತ್ತದೆ. ಇಲಾಖಾ ವತಿಯಿಂದ ಭರವಸೆಗಳನ್ನು ತೀವ್ರಗತಿಯಲ್ಲಿ ಈಡೇರಿಸಲು ಸಮಿತಿಯು ಆಗಿಂದಾಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡುತ್ತಾ, ಸದರಿ ಭರವಸೆಗಳು ಈಡೇರಿದ ನಂತರ ಮುಕ್ತಾಯಗೊಳಿಸಲಾಗಿರುತ್ತದೆ.

ಇಲ್ಲಿ ನಾನು ಪ್ರಮುಖವಾಗಿ ಹೆಮ್ಮೆಯಿಂದ ಹೇಳಲೇಬೇಕಾದ ಮತ್ತೊಂದು ಅಂಶವೇನೆಂದರೆ ಸಮಿತಿಯ ಸಭೆಗಳಿಗೆ ಮಾನ್ಯ ಸದಸ್ಯರುಗಳು ಹಾಜರಾಗುವ ಮುನ್ನವೇ ಎಲ್ಲರಿಗೂ ಲಿಖಿತ ಉತ್ತರದ ಮಾಹಿತಿಯನ್ನು ಅಧ್ಯಯನ ಮಾಡಿಕೊಂಡು ಬರಲು ಅನುವಾಗುವಂತೆ ಒದಗಿಸಲಾಗುತ್ತಿತ್ತು. ಎಲ್ಲ ಮಾನ್ಯ ಸದಸ್ಯರುಗಳು ಸಹ ಅತ್ಯಂತ ಆಸಕ್ತಿ/ಶ್ರದ್ಧೆ ವಹಿಸಿ ಎಲ್ಲಾ ವಿಷಯವನ್ನು ಅಧ್ಯಯನ ಮಾಡಿಕೊಂಡು ಬಂದು ಉತ್ತಮ ಗುಣಮಟ್ಟದ ಚರ್ಚೆಯ ಮೂಲಕ ಸಮಯ ವ್ಯರ್ಥ ಮಾಡದೆ ಬೆಳಿಗ್ಗೆ 11.00 ರಿಂದ ಸುಮಾರು ಮದ್ಯಾಹ್ನ 3.00 ಗಂಟೆಯ ತನಕವೂ ಸಭೆಗಳನ್ನು ನಡೆಸಲಾಗಿರುತ್ತದೆ. ಇದಕ್ಕೆ ಸಮಿತಿಯ ಮಾನ್ಯ ಸದಸ್ಯರುಗಳು ಸಹಕರಿಸಿರುವುದು ಹೆಮ್ಮೆಯ ವಿಷಯ. ಇದಕ್ಕೆ ಬೆಂಬಲವಾಗಿ ಸಭೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಅರ್ಥಪೂರ್ಣವಾದ ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ಅಮೂಲ್ಯವಾದ ಸಲಹೆ, ಸಹಕಾರಗಳನ್ನು ನೀಡುವ ಮೂಲಕ ಸಭೆಯ ಗಾಂಭೀರ್ಯವನ್ನು ಉತ್ತಮ ಮಟ್ಟಕ್ಕೆ ಕೊಂಡೊಯ್ಯಲು ಸಹಕರಿಸಿರುವ ಅವರೆಲ್ಲರಿಗೂ ನಾನು ಚಿರಋಣಿಯಾಗಿರುತ್ತೇನೆ. ನಾವು ಸರ್ಕಾರದ ಅಂಗವಾಗಿ ನಮ್ಮ ಕರ್ತವ್ಯಗಳನ್ನು ನಿಸ್ವಾರ್ಥತತೆಯಿಂದ ನಿರ್ವಹಿಸಿರುತ್ತೇವೆಂಬ ಸಮಾಧಾನ ನಮಗಿದೆ. ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಸಾರ್ವಜನಿಕರ ಹಣ ಮತ್ತು ಸರ್ಕಾರದ ಅನುದಾನವನ್ನು ಸದುಪಯೋಗಪಡಿಸಿಕೊಳ್ಳುವ ನಿಟ್ಟಿನಲ್ಲಿ ಆಡಳಿತ ಯಂತ್ರವನ್ನು

ಚುರುಕುಗೊಳಿಸುವ ನಿಟ್ಟಿನಲ್ಲಿ ಸಮಿತಿಯು ವ್ಯವಸ್ಥೆಯನ್ನು ಕಟುವಾಗಿ ಟೀಕಿಸಿರುತ್ತದೆಯೇ ವಿನ: ವೈಯಕ್ತಿಕ ಹಾಗೂ ವ್ಯಕ್ತಿಗತವಾದ ಆರೋಪ ಅಲ್ಲವೆಂದು ಇಲಾಖಾ ಮುಖ್ಯಸ್ಥರುಗಳಿಗೆ ಮನವರಿಕೆ ಮಾಡಲು ಇಚ್ಛಿಸುತ್ತೇವೆ. ಈ ನಿಟ್ಟಿನಲ್ಲಿ ಸಮಿತಿ ಸಭೆಗಳಲ್ಲಿ ಭಾಗವಹಿಸಿ ಸಹಕರಿಸಿದಂತಹ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಹಾಗೂ ವಿಧಾನ ಪರಿಷತ್ತಿನ ಅಧಿಕಾರಿಗಳಿಗೂ ಸಮಿತಿಯು ಅಭಿನಂದಿಸುತ್ತದೆ.

46ನೇ ಕರಡು ವರದಿಯನ್ನು ದಿನಾಂಕ: 22.02.2018 ರಂದು ನಡೆದ ಸಮಿತಿ ಸಭೆಯಲ್ಲಿ ಅಂಗೀಕರಿಸಲಾಗಿರುತ್ತದೆ.

ಬೆಂಗಳೂರು
ದಿನಾಂಕ: 22–02–2018

**ಬಸವರಾಜ ಹೊರಟ್ಟಿ**
ಅಧ್ಯಕ್ಷರು
ಸರ್ಕಾರಿ ಭರವಸೆಗಳ ಸಮಿತಿ